# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:09-01-2026 ರಂದು ಶುಕ್ರವಾರ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ 399ನೇ "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್, ಕೆ.ಎ.ಎಸ್.(ಸೂಪರ್ ಟೈಮ್ ಶ್ರೇಣಿ), ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಪ್ರೊ. ಆರ್. ಹಿರೇಮಣಿನಾಯ್ಕ, ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 5. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 6. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 7. | ಶ್ರೀ ಉಲ್ಲಾಸ್ ಇ.ಜಿ. ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಶೈಲಜಾ ಸಿದ್ದಪ್ಪ ಹೊಸಳ್ಳೇರ ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಚಿದಾನಂದ ಎನ್.ಕೆ. ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಎಂ. ವೆಂಕಟೇಶ್. ಪ್ರಾಂಶುಪಾಲರು | ಸದಸ್ಯರು |
| 11. | ಶ್ರೀ ಶಿವಕುಮಾರ್ ಎಂ. | ಸದಸ್ಯರು |
| 12. | ಶ್ರೀ ಲಕ್ಷ್ಮಿಕಾಂತ ಚಿಮನೂರು | ಸದಸ್ಯರು |
| 13. | ಪ್ರೊ. ಸಾಕಮ್ಮ ಬಿ. | ಸದಸ್ಯರು |
| 14. | ಶ್ರೀ ಮುಸಾವೀರ್ ಬಾಷಾ ಎಂ. | ಸದಸ್ಯರು |
| 15. | ಶ್ರೀ. ಕೆ.ಪಿ. ಶ್ರೀಪಾಲ್ | ಸದಸ್ಯರು |
| 16. | ಶ್ರೀ ಹೆಚ್.ಜಿ. ಅರವಿಂದ | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಕೇಶವ ಗೆಚ್. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 5. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಪ್ರಕರಣ 28(1)(ಎಫ್) ಅನ್ವಯ ಜೇಷ್ಟತೆಯನುಸಾರ ಸರದಿಯ ಮೇಲೆ ನೂತನವಾಗಿ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡ ಡಾ.ಚಿದಾನಂದ ಎನ್.ಕೆ., ಪ್ರಾಂಶುಪಾಲರು, ರಾಷ್ಟ್ರೀಯ ಶಿಕ್ಷಣ ಮಹಾವಿದ್ಯಾಲಯ, ಶಿವಮೊಗ್ಗ ಹಾಗೂ ಡಾ.ಎಂ. ವೆಂಕಟೇಶ್, ಪ್ರಾಂಶುಪಾಲರು, ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜು, ಶಿವಮೊಗ್ಗ ಇವರುಗಳನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಇದೇ ಸಂದರ್ಭದಲ್ಲಿ ಸಿಂಡಿಕೇಟ್ ಸದಸ್ಯತ್ವ ಅವಧಿ ಮುಗಿದ ಡಾ.ಜಿ.ಮಧು, ಪ್ರಾಂಶುಪಾಲರು, ಕುವೆಂಪು ಶತಮಾನೋತ್ಸವ ಶಿಕ್ಷಣ ಮಹಾವಿದ್ಯಾಲಯ, ಶಿವಮೊಗ್ಗ ಹಾಗೂ ಡಾ.ಕೆ.ಎಲ್.ಅರವಿಂದ, ಪ್ರಾಂಶುಪಾಲರು, ಎಸ್.ಆರ್.ಎನ್.ಎಂ. ಅನ್ವಯಿಕ ವಿಜ್ಞಾನ ಕಾಲೇಜು, ಶಿವಮೊಗ್ಗ ಇವರುಗಳು ನೀಡಿದ ಸಲಹೆ ಮತ್ತು ಸಹಕಾರಗಳನ್ನು ಸ್ಮರಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಅವರುಗಳನ್ನು ಎಲ್ಲಾ ಸದಸ್ಯರು ಅಭಿನಂದಿಸಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಯವರು, ಎಲ್ಲಾ ಸದಸ್ಯರುಗಳಿಗೆ 2026ನೇ ಹೊಸವರ್ಷದ ಶುಭಾಶಯಗಳನ್ನು ತಿಳಿಸಿ ಮಾತನಾಡುತ್ತಾ, ಇತ್ತೀಚೆಗೆ ಗುಜರಾತ್‌ನ ಅಹ್ಮದಾಬಾದ್‌ನಲ್ಲಿ ನಡೆದ ಖೇಲೋ ಇಂಡಿಯಾ ಅಂತರ ವಿಶ್ವವಿದ್ಯಾಲಯ ರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಕುವೆಂಪು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ್ದ ಕು. ಸುದೀಪ್ ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜು ಇವರು ಹೈಜಂಪ್ ಸ್ಪರ್ಧೆಯಲ್ಲಿ ಸ್ವರ್ಣಪದಕ ಪಡೆದಿರುವುದನ್ನು ಸದಸ್ಯರಿಗೆ ತಿಳಿಸಿದರು. ಎಲ್ಲಾ ಸದಸ್ಯರು ಕು. ಸುದೀಪ್‌ರವರ ಸಾಧನೆ ಬಗ್ಗೆ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದರು. ಮುಂದುವರೆದು ಮಾತನಾಡಿದ ಮಾನ್ಯ ಕುಲಪತಿಯವರು, ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಂಶೋಧನೆಗೆ ಸಂಬಂಧಪಟ್ಟ ಬಹಳಷ್ಟು ವಿಷಯಗಳು ಚರ್ಚೆ ಮತ್ತು ನಿರ್ಣಯಕ್ಕೆ ಇವೆ. ಆದುದರಿಂದ ಉತ್ತಮ ಚರ್ಚೆ ನಡೆಸಿ ನಿರ್ಣಯ ಕೈಗೊಳ್ಳೋಣ ಎಂದರು. ನಂತರ ಅಜೆಂಡಾ ಪ್ರಕಾರ ವಿಷಯವನ್ನು ಚರ್ಚೆಗೆ ಕೈಗೆತ್ತಿಗೊಳ್ಳಲಾಯಿತು.

**ಪ್ರಾಧಿಕಾರ ವಿಭಾಗ**

**2026–ಸಿಂ–1.01:** ದಿನಾಂಕ:12–08–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ದಿನಾಂಕ:12–08–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಸಭೆಯ ಅನುಮೋದನೆ ಹಾಗೂ ದೃಢೀಕರಣಕ್ಕಾಗಿ ಕುಲಸಚಿವರು ಮಂಡಿಸಿದರು. ಸದಸ್ಯರಾದ ಶ್ರೀ ಕೆ.ಪಿ. ಶ್ರೀಪಾಲ್‌ರವರು ವಿಷಯ ಸಂಖ್ಯೆ:2025–ಸಿಂ–5.01(ಎ) ಕುರಿತು ಮಾತನಾಡಿ, 110 ಜನ ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಕಡಿತಗೊಳಿಸುವುದಾಗಿ ತಿಳಿಸಲಾಗಿತ್ತು. ಆದರೆ, ಈಗ ಹೆಚ್ಚಿನ ಸಂಖ್ಯೆಯಲ್ಲಿ ಕಡಿತವಾಗಿಲ್ಲ ಎಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ, ಒಂದು ಮಾನದಂಡ (criteria) ಇಟ್ಟುಕೊಂಡು ಕಡಿತಗೊಳಿಸುವುದಾಗಿ ತಿಳಿಸಿದ್ದಿರಿ. ಆದರೆ ಮಾನದಂಡ (criteria) ಪಾಲನೆ ಮಾಡಿಲ್ಲ ಎಂದರು.

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಜನಪ್ರತಿನಿಧಿಗಳು ಹಾಗೂ ಸಿಂಡಿಕೇಟ್ ಸದಸ್ಯರು ಈ ಹಿಂದೆ ಕುಲಸಚಿವರು ಹಾಗೂ ಕುಲಪತಿಯವರನ್ನು ಭೇಟಿಯಾಗಿ ಯಾವುದೇ ನೌಕರರನ್ನು ಕಡಿತಗೊಳಿಸುವುದು ಬೇಡ ಎಂದು ಮನವಿ ಮಾಡಿದ್ದು, ಈಗ ಮಾನದಂಡ (criteria) ಪಾಲನೆ ಮಾಡಿಲ್ಲ ಎಂದರೆ ಹೇಗೆ? ಎಂದರು.

ಕುಲಸಚಿವರು ಮಾತನಾಡಿ, ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಡಿತಗೊಳಿಸಬೇಕಾಗಿತ್ತು. ಈ ಬಗ್ಗೆ ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ಕೂಡ ಚರ್ಚೆಯಾಗಿದ್ದು, ಬಹಳಷ್ಟು ಸದಸ್ಯರು ಯಾರನ್ನೂ ತೆಗೆಯುವುದು ಬೇಡ ಎಂದಿದ್ದಾರೆ. ನೌಕರರ ಸಂಖ್ಯೆಯನ್ನು ಕಡಿಮೆ ಮಾಡದಿದ್ದರೆ ಅನುದಾನ ಕಡಿತಗೊಳಿಸುವುದಾಗಿ ಸರ್ಕಾರ ತಿಳಿಸಿದೆ. ಆದರೆ, ಈ ಹಿಂದೆ ಕೆಲಸ ನಿರ್ವಹಿಸುತ್ತಿದ್ದ ಬಹಳಷ್ಟು ನೌಕರರು ಕಳೆದ 15–20 ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಅರ್ಹರಿದ್ದಾರೆ. ಆದಾಗ್ಯೂ 60 ಜನರನ್ನು ಕಡಿಮೆ ಮಾಡಲಾಗಿದೆ. ಇದರಿಂದ ವಾರ್ಷಿಕ ರೂ1.50 ಕೋಟಿಗಳು ಉಳಿತಾಯವಾಗುತ್ತದೆ. ಮುಂದಿನ 06 ತಿಂಗಳಿಂದ ಒಂದು ವರ್ಷದ ಅವಧಿಯಲ್ಲಿ ಹಲವು ಹೊರಗುತ್ತಿಗೆ ನೌಕರರು ನಿವೃತ್ತಿ ಹೊಂದಲಿದ್ದಾರೆ. ಅವರಿಂದ ತೆರವಾಗುವ ಸ್ಥಾನಗಳಿಗೆ ಮುಂದಿನ 2 ವರ್ಷಗಳ ಕಾಲ ಬೇರೆಯವರನ್ನು ತೆಗೆದುಕೊಳ್ಳುವುದಿಲ್ಲ. ಖಾಯಂ ನೌಕರರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ನಿವೃತ್ತರಾಗುತ್ತಿದ್ದಾರೆ ಎಂದರು. ಪ್ರೊ. ಸಾಕಮ್ಮ ಬಿ. ಮತ್ತು ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ನೇಮಕಾತಿ ಪತ್ರ ನೀಡುವ ಕಾರ್ಯಕ್ರಮಕ್ಕೆ ಭದ್ರಾವತಿಯ ಶಾಸಕರನ್ನು ಮಾತ್ರ ಆಹ್ವಾನಿಸಿದ್ದು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಇತರೆ ಶಾಸಕರನ್ನು ಕೂಡ ಆಹ್ವಾನಿಸಬೇಕಾಗಿತ್ತು ಎಂದರು. ಶ್ರೀ ಮುಸಾವೀರ್‌ಬಾಷಾರವರು ಮಾತನಾಡಿ, ಹೊರಗುತ್ತಿಗೆ ನೌಕರರಿಗೆ ನೇಮಕಾತಿ ಪತ್ರ ನೀಡುವುದು ವಿಶ್ವವಿದ್ಯಾಲಯದ ಕಾರ್ಯಕ್ರಮವಾಗಿರಲಿಲ್ಲ. ಹೊರಗುತ್ತಿಗೆ ಸಂಸ್ಥೆಯವರೇ ಸಿಬ್ಬಂದಿಗಳಿಗೆ ನೇರವಾಗಿ ನೇಮಕಾತಿ ಪತ್ರ ನೀಡಿದ್ದಾರೆ. ಈ ಭಾಗದ ಶಾಸಕರು ಹೊರಗುತ್ತಿಗೆ ನೌಕರರ ನೇಮಕ ಮತ್ತು ವೇತನದ ವಿಚಾರವಾಗಿ ಹಲವಾರು ಬಾರಿ ವಿಶ್ವವಿದ್ಯಾಲಯಕ್ಕೆ ಬಂದು ಅಹವಾಲು ಸ್ವೀಕರಿಸಿ ಅಧಿಕಾರಿಗಳೊಂದಿಗೆ ಚರ್ಚಿಸಿ ನೌಕರರ ಸಮಸ್ಯೆಗಳನ್ನು ಬಗೆಹರಿಸಲು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಪ್ರಯತ್ನಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಹೊರಗುತ್ತಿಗೆ ನೌಕರರೇ, ನೇಮಕಾತಿ ಪತ್ರಗಳನ್ನು ಶಾಸಕರ ಕೈಯಿಂದ ಪಡೆಯಬೇಕೆಂಬ ಅಭಿಲಾಷೆಯಿಂದ ಶಾಸಕರನ್ನು ಆಹ್ವಾನಿಸಿದ್ದರು. ಭದ್ರಾವತಿಯ ಮಾನ್ಯ ಶಾಸಕರು 8–10 ನೌಕರರಿಗೆ ಮಾತ್ರ ಸಾಂಕೇತಿಕವಾಗಿ ನೀಡಿದ್ದು, ಉಳಿದ ನೇಮಕಾತಿ ಪತ್ರಗಳನ್ನು ಏಜನ್ಸಿಯವರೇ ನೇರವಾಗಿ ನೀಡಿದ್ದಾರೆ ಎಂದರು.

ಶ್ರೀ ಕೆ.ಪಿ.ಶ್ರೀಪಾಲ್‌ರವರು ವಿಷಯ ಸಂಖ್ಯೆ:2025–ಸಿಂ–5.02(ಇ) ಕುರಿತು ಮಾತನಾಡಿ, ವಿಶ್ವವಿದ್ಯಾಲಯದ 35ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನ ಮಾಡುವ ಗೌರವ ಡಾಕ್ಟರೇಟ್ ಪದವಿಗೆ ಸ್ವೀಕೃತವಾಗುವ ಅರ್ಜಿಗಳು ಹಾಗೂ ಸ್ವ–ವಿವರಗಳನ್ನು ಪರಿಶೀಲಿಸಿ ಅರ್ಹ ಗಣ್ಯರ ಪಟ್ಟಿಯನ್ನು ಸಿದ್ಧಪಡಿಸಲು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ಸದಸ್ಯರಾದ ಡಾ.ಕೆ.ಎಲ್.ಅರವಿಂದ್‌ರವರ ಸಿಂಡಿಕೇಟ್ ಸದಸ್ಯತ್ವದ ಅವಧಿಯು ಈಗಾಗಲೇ ಮುಕ್ತಾಯಗೊಂಡಿರುವುದರಿಂದ ಬೇರೊಬ್ಬರನ್ನು ನೇಮಕ ಮಾಡಬೇಕು ಎಂದರು.

ಚರ್ಚೆಯ ನಂತರ, ಗೌರವ ಡಾಕ್ಟರೇಟ್ ಪದವಿಗೆ ಸ್ವೀಕೃತವಾಗುವ ಅರ್ಜಿಗಳು ಹಾಗೂ ಸ್ವ–ವಿವರಗಳನ್ನು ಪರಿಶೀಲಿಸಿ ಅರ್ಹ ಗಣ್ಯರ ಪಟ್ಟಿಯನ್ನು ಸಿದ್ಧಪಡಿಸಲು ರಚಿಸಿರುವ ಸಮಿತಿಗೆ ಸಿಂಡಿಕೇಟ್ ಸದಸ್ಯತ್ವದ ಅವಧಿ ಮುಗಿದಿರುವ ಡಾ.ಕೆ.ಎಲ್. ಅರವಿಂದ್‌ರವರ ಬದಲಿಗೆ ಡಾ. ಎಂ. ವೆಂಕಟೇಶ್‌ರವರನ್ನು ಸರ್ವಾನುಮತದಿಂದ ನಾಮನಿರ್ದೇಶನ ಮಾಡಲಾಯಿತು.

ಶ್ರೀ ಶಿವಕುಮಾರ್ ಎಂ.ರವರು ಮಾತನಾಡಿ, ಪ್ರೊ.ಅನುರಾಧ ಪಟೇಲ್‌ರವರ ರಜೆ ಮಂಜೂರಾತಿ ಕುರಿತಾಗಿ ಕಾನೂನು ಸಲಹೆಗಾರರಿಗೆ ಪತ್ರ ಬರೆಯಲಾಗಿತ್ತು, ಕಾನೂನು ಸಲಹೆ ಬಂದ ನಂತರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿತ್ತು. ಏನು ಕ್ರಮ ಆಗಿದೆ ಎಂದರು. ಕುಲಸಚಿವರು ಮಾತನಾಡಿ, ಕಾನೂನು ಸಲಹೆ ಪಡೆಯಲಾಗಿದೆ ಅವರಿಗೆ 2ನೇ ಅವಧಿಯಲ್ಲಿ ವೇತನ ರಹಿತ ರಜೆ ಮಂಜೂರು ಮಾಡಲಾಗಿದೆ ಎಂದರು.

**ನಿರ್ಣಯ:** ಮೇಲ್ಕಂಡಂತೆ ಚರ್ಚೆ ಮತ್ತು ನಿರ್ಣಯಗಳ ನಂತರ, ಸದರಿ ತಿದ್ದುಪಡಿಗಳನ್ನು ಸೇರ್ಪಡೆಗೊಳಿಸಿ ದಿನಾಂಕ:12–08–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.

**2026–ಸಿಂ–1.02:** ದಿನಾಂಕ:12–08–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ಚರ್ಚೆ:** ವಿಷಯ ಸಂಖ್ಯೆ:2025–ಸಿಂ–5.02 ಬಗ್ಗೆ ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ ಶ್ರೀಮತಿ ಅಮರಜ್ಯೋತಿ ಇವರ ಬಡ್ತಿ ಬಗ್ಗೆ ಕ್ರಮ ಕೈಗೊಳ್ಳಿ ಎಂದರು. ಪ್ರೊ. ಸಾಕಮ್ಮ ಬಿ.ರವರು ಕೂಡ ಧ್ವನಿಗೂಡಿಸಿದರು. ಕುಲಸಚಿವರು ಮಾತನಾಡಿ, ಸದರಿಯವರ ಹುದ್ದೆಗೆ ಮೀಸಲಾತಿ ಅನ್ವಯಿಸುವ ಕುರಿತು ನಿರ್ದೇಶನ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ನಿರ್ದೇಶನವನ್ನು ನಿರೀಕ್ಷಿಸಲಾಗುತ್ತಿದೆ. ಏತನ್ಮಧ್ಯೆ ಶ್ರೀಮತಿ ಸಂತೋಷಿಬಾಯಿರವರು ಬಡ್ತಿ ಕುರಿತಾಗಿ ಎಸ್.ಸಿ./ಎಸ್.ಟಿ.ಆಯೋಗಕ್ಕೆ ಪತ್ರ ಬರೆದಿದ್ದು, ಆಯೋಗದಿಂದ ನೋಟೀಸ್ ನೀಡಿ ಮಾಹಿತಿ ನೀಡುವಂತೆ ಕೇಳಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ನಿರ್ದೇಶನ ಕೋರಿ ಪತ್ರ ಬರೆಯಲಾಗಿದ್ದು, ಸರ್ಕಾರದಿಂದ ಪತ್ರ ಬಂದ ನಂತರ ಕ್ರಮ ವಹಿಸುವುದಾಗಿ ಆಯೋಗಕ್ಕೆ ಉತ್ತರ ನೀಡಲಾಗಿದೆ. ಆದುದರಿಂದ, ಸರ್ಕಾರದಿಂದ ನಿರ್ದೇಶನ ಬಂದ ನಂತರ ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದರು.

ಪ್ರೊ. ಸಾಕಮ್ಮ ಬಿ.ರವರು ಮಾತನಾಡಿ, ಶ್ರೀಮತಿ ಸುಮನ್ ಎ. ಆಚಾರ್‌ರವರಿಗೆ ಪವಿತ್ರ 1 ಮತ್ತು 2ರ ಪ್ರಕರಣಗಳ ಅಡಿಯಲ್ಲಿ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ 2007 ರಿಂದ ಸಹಾಯಕ ಕುಲಸಚಿವರ ಹುದ್ದೆಗೆ ಅರ್ಹತಾ ದಿನಾಂಕವನ್ನು ಪರಿಗಣಿಸಿ ಪರಿಷ್ಕೃತ ಆದೇಶ ನೀಡಲು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಗಿತ್ತು. ಆದರೆ, ಯಾವುದೇ ಕ್ರಮ ಆಗಿಲ್ಲ ಎಂದರು. ಕುಲಸಚಿವರು ಮಾತನಾಡಿ ಅವರು ಮನವಿ ಮತ್ತು ದಾಖಲಾತಿಗಳಗನ್ನು ಸಲ್ಲಿಸಿದ್ದಾರೆ. ಸರ್ಕಾರಿ ಆದೇಶದನ್ವಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ವಿಷಯ ಸಂಖ್ಯೆ:2025–ಸಿಂ–5.15(ಎ)ನಲ್ಲಿ ಖಾಯಂ ಅಧ್ಯಾಪಕರು ಇಲ್ಲದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಬೇರೆ ವಿಭಾಗದ ಅಧ್ಯಾಪಕರನ್ನು 'ಅಧ್ಯಕ್ಷರು' ಎಂಬುದರ ಬದಲಾಗಿ 'ಸಂಯೋಜನಾಧಿಕಾರಿ' ಎಂದು ನೇಮಕ ಮಾಡಲು ನಿರ್ಣಯಿಸಲಾಗಿತ್ತು. ಇದರನ್ವಯ ಆದೇಶ ಕೂಡ ಹೊರಡಿಸಲಾಗಿತ್ತು. ಇದಕ್ಕೆ ಕೆಲವು ವಿಭಾಗಗಳ ಮುಖ್ಯಸ್ಥರು ಆಕ್ಷೇಪಿಸಿ, ಸಂಯೋಜನಾಧಿಕಾರಿ ಎಂದು ನೇಮಕ ಮಾಡಲು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದಲ್ಲಿ ಅವಕಾಶವಿಲ್ಲ. ಆದುದರಿಂದ, 'ಅಧ್ಯಕ್ಷರು' ಎಂದೇ ನೇಮಕ ಮಾಡುವಂತೆ ಮತ್ತು ಈಗಾಗಲೇ 'ಸಂಯೋಜನಾಧಿಕಾರಿ' ಎಂದು ನೇಮಕ ಮಾಡಿರುವ ಪ್ರಕರಣಗಳಲ್ಲಿ 'ಅಧ್ಯಕ್ಷರು' ಎಂದು ಪರಿಷ್ಕೃತ ಆದೇಶ ನೀಡುವಂತೆ ಕೋರಿದ್ದಾರೆ ಎಂದರು. ಪ್ರೊ. ಆರ್.ಹಿರೇಮಣಿನಾಯ್ಕರವರು ಮಾತನಾಡಿ, ಪ್ರಾಧ್ಯಾಪಕರನ್ನು 'ಸಂಯೋಜನಾಧಿಕಾರಿ' ಎಂದು ನೇಮಕ ಮಾಡುವಂತಿಲ್ಲ ಹಾಗೆ ನೇಮಕ ಮಾಡಿದಲ್ಲಿ ವಿದ್ಯಾರ್ಥಿಗಳ ಬಸ್‌ಪಾಸ್, ಸ್ಕಾಲರ್‌ಶಿಪ್ ಸೇರಿದಂತೆ ವಿವಿಧ ಅರ್ಜಿಗಳಿಗೆ ದೃಢೀಕರಣ ಮಾಡಲು ತೊಂದರೆಯಾಗುತ್ತದೆ. ಆದುದರಿಂದ, 'ಅಧ್ಯಕ್ಷರು' ಎಂದೇ ನೇಮಕ ಮಾಡಬೇಕು ಎಂದರು.

ಪ್ರೊ. ಸಾಕಮ್ಮ ಬಿ. ರವರು ಮಾತನಾಡಿ, ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗಕ್ಕೆ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂಹವನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಎಂ.ಆರ್. ಸತ್ಯಪ್ರಕಾಶ್‌ರವರನ್ನು 'ಸಂಯೋಜನಾಧಿಕಾರಿ' ಎಂದು ನೇಮಕ ಮಾಡಿರುವುದು ಸರಿಯಲ್ಲ. ಸದರಿ ಪ್ರಾಧ್ಯಾಪಕರು ಅರ್ಥಶಾಸ್ತ್ರ ವಿಷಯದ ತಜ್ಞರಲ್ಲದೇ ಇರುವುದರಿಂದ ಅರ್ಥಶಾಸ್ತ್ರ ವಿಷಯ ತಜ್ಞರನ್ನು ವಿಭಾಗದ ಅಧ್ಯಕ್ಷರಾಗಿ ನೇಮಿಸಬೇಕಾಗುತ್ತದೆ. ಯಾವುದೇ ಖಾಯಂ ಅಧ್ಯಾಪಕರು ಇಲ್ಲದ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಬೇರೆ ವಿಭಾಗಗಳ ಪ್ರಾಧ್ಯಾಪಕರನ್ನು ಅಧ್ಯಕ್ಷರಾಗಿ ನೇಮಕ ಮಾಡುವ ಬದಲು ಸಹ್ಯಾದ್ರಿ ಕಾಲೇಜಿನಲ್ಲಿರುವ ಅದೇ ವಿಷಯದ ಅಧ್ಯಾಪಕರನ್ನು ನೇಮಕ ಮಾಡಬಹುದು. ಇದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಆದುದರಿಂದ, ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಸಹ್ಯಾದ್ರಿ ಕಾಲೇಜಿನ ಡಾ. ಮುದುಕಪ್ಪ ರವರನ್ನು ನೇಮಕ ಮಾಡಿ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಘಟಕ ಕಾಲೇಜಿನ ಅಧ್ಯಾಪಕರನ್ನು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಿಗೆ ಅಧ್ಯಕ್ಷರಾಗಿ ನೇಮಕ ಮಾಡಬಹುದು ಎಂದರು. ಕುಲಸಚಿವರು ಮಾತನಾಡಿ, ಪ್ರಸ್ತುತ ಸ್ನಾತಕ ಕಾಲೇಜಿನ ಅಧ್ಯಾಪಕರನ್ನು ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರಾಗಿ ನೇಮಕ ಮಾಡುತ್ತಿಲ್ಲ. ಸಹ್ಯಾದ್ರಿ ಕಲಾ ಕಾಲೇಜಿನ ಅರ್ಥಶಾಸ್ತ್ರ ವಿಷಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ. ಮುದುಕಪ್ಪರವರನ್ನು ಹೊರತುಪಡಿಸಿ ಬೇರೆ ಯಾರೂ ಖಾಯಂ ಅಧ್ಯಾಪಕರಿಲ್ಲ. ಅಲ್ಲದೇ, ಸಹ್ಯಾದ್ರಿ ಕಾಲೇಜಿನಲ್ಲಿ ಕೂಡ ಎಂ.ಎ. ಅರ್ಥಶಾಸ್ತ್ರ ಕೋರ್ಸ್ ಇದ್ದು, ಅದರ ಮುಖ್ಯಸ್ಥರು ಡಾ.ಮುದುಕಪ್ಪರವರೇ ಆಗಿದ್ದಾರೆ. ಅವರನ್ನು ವಿಶ್ವವಿದ್ಯಾಲಯದ ವಿಭಾಗಕ್ಕೆ ನೇಮಿಸಿದಲ್ಲಿ ಸಹ್ಯಾದ್ರಿ ಕಾಲೇಜಿನಲ್ಲಿ ಖಾಯಂ ಅಧ್ಯಾಪಕರು ಇಲ್ಲದೇ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದರು.

ಪ್ರೊ.ಆರ್.ಹಿರೇಮಣಿನಾಯ್ಕ್‌ರವರು ಮಾತನಾಡಿ, ಸಹ್ಯಾದ್ರಿ ಕಾಲೇಜಿನ ಅಧ್ಯಾಪಕರನ್ನು ಸ್ನಾತಕೋತ್ತರ ವಿಭಾಗಗಳಿಗೆ ಅಧ್ಯಕ್ಷರಾಗಿ ನೇಮಕ ಮಾಡಲು ಅವಕಾಶವಿಲ್ಲ. ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಬಿ.ಓ.ಎಸ್., ಬಿ.ಓ.ಇ., ಡಾಕ್ಟರಲ್ ಕಮಿಟಿ ಸೇರಿದಂತೆ ವಿವಿಧ ಸಮಿತಿಗಳಲ್ಲಿ ಬಹಳಷ್ಟು ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಇದಲ್ಲದೇ, ವಿಭಾಗಾಧ್ಯಕ್ಷರಿಗೆ ವಿವಿಧ ರೀತಿಯ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಜವಾಬ್ದಾರಿಗಳಿದ್ದು, ಅವರು ಕೇಂದ್ರ ಸ್ಥಾನದಲ್ಲಿಯೇ ಇದ್ದು ಕಾರ್ಯನಿರ್ವಹಿಸಬೇಕಾಗುತ್ತದೆ. ಅಲ್ಲದೇ, ಡಾ.ಮುದುಕಪ್ಪರವರು ಸಹ್ಯಾದ್ರಿ ಕಾಲೇಜು ಮತ್ತು ವಿಶ್ವವಿದ್ಯಾಲಯ ಎರಡೂ ಸ್ಥಳಗಳಲ್ಲಿ ಏಕಕಾಲದಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಎರಡೂ ಕಡೆಯ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಮಾತ್ರವಲ್ಲದೇ ವಿಭಾಗದ ಶೈಕ್ಷಣಿಕ ಚಟುವಟಿಕೆಗಳಿಗೆ ಹಿನ್ನಡೆಯಾಗುತ್ತದೆ ಎಂದರು.

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಎರಡೂ ಕಡೆ ನೀಡಲು ಅವಕಾಶವಿದೆ. ಡಾ.ಮುದುಕಪ್ಪ ಇನ್ನೂ ಕಿರಿಯರಿದ್ದು, ಕಾರ್ಯನಿರ್ವಹಿಸುತ್ತಾರೆ ಎಂದರು.

ಕುಲಸಚಿವರು ಮುಂದುವರೆದು ಮಾತನಾಡಿ, ಡಾ.ಮುದುಕಪ್ಪರವರು ಸಹಾಯಕ ಪ್ರಾಧ್ಯಾಪಕರಾಗಿರುವುದರಿಂದ ಈ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಚರ್ಚೆಯ ನಂತರ, ಖಾಯಂ ಅಧ್ಯಾಪಕರು ಇಲ್ಲದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಬೇರೆ ವಿಭಾಗದ ಅಧ್ಯಾಪಕರನ್ನು 'ಸಂಯೋಜನಾಧಿಕಾರಿ' ಎಂಬುದರ ಬದಲಾಗಿ ಈ ಹಿಂದಿನಂತೆಯೇ ಅಧ್ಯಕ್ಷರು ಎಂದು ನೇಮಕ ಮಾಡಲು ಅನುಮೋದಿಸಿದ ಸಭೆಯು ಈ ಕುರಿತು ಈಗಾಗಲೇ ಮಾಡಿರುವ ನೇಮಕಗಳಿಗೆ ಪರಿಷ್ಕೃತ ಆದೇಶ ಹೊರಡಿಸಬೇಕೆಂದು ನಿರ್ಣಯಿಸಿತು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:12-08-2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಮೇಲಿನಂತೆ ತಿದ್ದುಪಡಿಯೊಂದಿಗೆ ಅನುಮೋದಿಸಿತು.

**2026–ಸಿಂ–1.03:** ವಿಶ್ವವಿದ್ಯಾಲಯದ ಹಣಕಾಸು ಸಮಿತಿಗೆ ಸಿಂಡಿಕೇಟ್‌ನಿಂದ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ ಹಣಕಾಸು ಸಮಿತಿಗೆ ಸಿಂಡಿಕೇಟ್‌ನಿಂದ ನಾಮನಿರ್ದೇಶನ ಮಾಡಲಾಗಿದ್ದ ಶ್ರೀ ಶಿವಕುಮಾರ್ ಎಂ.ರವರ ಸದಸ್ಯತ್ವದ ಒಂದು ವರ್ಷದ ಅವಧಿಯು ದಿನಾಂಕ:11-03-2026ಕ್ಕೆ ಮುಕ್ತಾಯವಾಗುತ್ತಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000ರ ಪ್ರಕರಣ–32(1)(v) ರನ್ವಯ ಹಣಕಾಸು ಸಮಿತಿಗೆ ಸಿಂಡಿಕೇಟ್‌ನಿಂದ ಪ್ರೊ. ಸಾಕಮ್ಮ ಬಿ. ರವರನ್ನು ದಿನಾಂಕ:12-03-2026 ರಿಂದ ಅನ್ವಯವಾಗುವಂತೆ ಒಂದು ವರ್ಷದ ಅವಧಿಗೆ ಹಣಕಾಸು ಸಮಿತಿಯ ಸದಸ್ಯರನ್ನಾಗಿ ಸರ್ವಾನುಮತದಿಂದ ನಾಮನಿರ್ದೇಶನ ಮಾಡಲಾಯಿತು.

**2026–ಸಿಂ–1.04:** ಸ್ನಾತಕ ಶಿಕ್ಷಣ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ಚರ್ಚೆ:** ವಿಶ್ವವಿದ್ಯಾಲಯದ ಸ್ನಾತಕ ಶಿಕ್ಷಣ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಲು ಅಧ್ಯಯನ ಮಂಡಳಿಯ ಅಧ್ಯಕ್ಷರು ಸಲ್ಲಿಸಿರುವ ಆಂತರಿಕ ಮತ್ತು ಬಾಹ್ಯ ಪರಿಣಿತರ ಪಟ್ಟಿಯನ್ನು ಅನುಮೋದನೆಗಾಗಿ ಕುಲಸಚಿವರು ಮಂಡಿಸಿದರು. ಪ್ರೊ.ಆರ್.ಹಿರೇಮಣಿನಾಯ್ಕ್‌ರವರು ಮಾತನಾಡಿ, ರೆಗ್ಯುಲೇಷನ್ ಪ್ರಕಾರ ಸ್ನಾತಕೋತ್ತರ ಅಧ್ಯಯನ ಮಂಡಳಿಯ ಅಧ್ಯಕ್ಷರೇ ಸ್ನಾತಕ ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿರಬೇಕು. ಸ್ನಾತಕ ಪದವಿಯವರು ಸದಸ್ಯರಾಗಿರಬಹುದು ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, communal mind (ಮತೀಯ ಮನಸ್ಸು) ಇರುವವರನ್ನು ಸಿಲಬಸ್ ಸಮಿತಿಗೆ ಹಾಕಬಾರದು. ಇದರಿಂದ ವಿದ್ಯಾರ್ಥಿಗಳಿಗೆ ಧರ್ಮಾಧಾರಿತ ಪಠ್ಯಕ್ರಮ ನೀಡಬಾರದು ಎಂದರು. ಡಾ.ಶೈಲಜಾ ಸಿದ್ಧಪ್ಪ ಹೊಸಳ್ಳೇರರವರು ಮಾತನಾಡಿ, ಸಂಬಂಧಿಸಿದ ವಿಷಯಗಳ ಅಧ್ಯಾಪಕರನ್ನು ಜೇಷ್ಠತೆ ಆಧಾರದಲ್ಲಿ ನೇಮಕ ಮಾಡುತ್ತಾರೆ. ಯಾರನ್ನಾದರೂ ಹಾಕಬೇಕು ಅಥವಾ ಹಾಕಬಾರದು ಎನ್ನುವಂತಿಲ್ಲ ಎಂದರು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ ಶಿಕ್ಷಣ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–1.05:** ಸ್ನಾತಕ ಗೃಹ ವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ ಗೃಹವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–1.06:** ಸ್ನಾತಕ ಬಿ.ಎಸ್ಸಿ. ಕಂಪ್ಯೂಟರ್ ಸೈನ್ಸ್ ಮತ್ತು ಬಿ.ಸಿ.ಎ. ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ

ನಿರ್ಣಯ: ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ ಬಿ.ಎಸ್ಸಿ. ಕಂಪ್ಯೂಟರ್ ಸೈನ್ಸ್ ಮತ್ತು ಬಿ.ಸಿ.ಎ. ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–1.07:** ಸ್ನಾತಕ ಮತ್ತು ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ, ಶಿಕ್ಷಣದ ಬಗ್ಗೆ ಆಸಕ್ತಿ ಹೊಂದಿರುವ ಹಾಗೂ ಶೈಕ್ಷಣಿಕ ಲೇಖನಗಳನ್ನು ಬರೆಯುತ್ತಿರುವ ಮತ್ತು ವಿಶೇಷ ಉಪನ್ಯಾಸಗಳನ್ನು ನೀಡುತ್ತಿರುವ ಪತ್ರಕರ್ತರಾದ ಶ್ರೀ ಚಂದ್ರಹಾಸ ಹಿರೇಮಳಲಿ ಇವರ ಹೆಸರನ್ನು ತಜ್ಞರ ಪಟ್ಟಿಗೆ ಸೇರ್ಪಡೆಗೊಳಿಸಲು ಅನುಮೋದಿಸಿದ ಸಭೆಯು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ ಮತ್ತು ಸ್ನಾತಕೋತ್ತರ ಪತ್ರಿಕೋಧ್ಯಮ ಮತ್ತು ಸಮೂಹ ಸಂವಹನ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–1.08:** ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–1.09:** ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–1.10:** ಸ್ನಾತಕೋತ್ತರ ಕನ್ನಡ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಕನ್ನಡ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–1.11:** ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2026–ಸಿಂ–1.12:** 2026–27ನೇ ಸಾಲಿನ ಸಂಯೋಜನಾ ಶುಲ್ಕಗಳ ಪರಿಷ್ಕರಣೆ ಕುರಿತು.

**ನಿರ್ಣಯ:** ಚರ್ಚೆಯ ನಂತರ, ದಿನಾಂಕ:06–11–2025ರಂದು ನಡೆದ ಕಾಲೇಜು ಅಭಿವೃದ್ಧಿ ಪರಿಷತ್ತಿನ ಸಲಹಾ ಸಮಿತಿ ಸಭೆಯ ನಿರ್ಣಯದಂತೆ 2026–27ನೇ ಸಾಲಿನಿಂದ ಅನ್ವಯವಾಗುವಂತೆ, ವಿಶ್ವವಿದ್ಯಾಲಯದ ಸಂಯೋಜನೆ/ಸೇವಾ/ವಿವಿ ಅಭಿವೃದ್ಧಿ ಶುಲ್ಕಗಳನ್ನು ಶೇ.15ರಷ್ಟು ಹೆಚ್ಚಿಸಿ, ಮಾನ್ಯ ಕುಲಪತಿಯವರ ಅನುಮೋದನೆ ಪಡೆದುಕೊಂಡು ಅಧಿಸೂಚನೆ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2026–ಸಿಂ–1.13:** ಸ್ನಾತಕ/ಸ್ನಾತಕೋತ್ತರ ಶಿಕ್ಷಣ ಪದವಿ ಕೋರ್ಸ್‌ಗಳ ಸಂಯೋಜನೆಗಾಗಿ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯವನ್ನು ಮಂಡಿಸುತ್ತಾ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶದ ಪ್ರಕಾರ 2026–27ನೇ ಸಾಲಿನ ಸಂಯೋಜನೆ ಪ್ರಕ್ರಿಯೆಗಳನ್ನು ಸರ್ಕಾರ ನಿಗದಿಪಡಿಸಿದ ಕಾಲಮಿತಿಯಲ್ಲಿ ಕೈಗೊಳ್ಳಬೇಕಾಗಿದ್ದ ಹಿನ್ನೆಲೆಯಲ್ಲಿ, ಕಾಲೇಜುಗಳಿಗೆ ಭೇಟಿ ನೀಡುವ ಸಲುವಾಗಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಿ, ಆದೇಶ ನೀಡಬೇಕಾದ ತುರ್ತು ಅಗತ್ಯತೆ ಇದ್ದುದ್ದರಿಂದ ಸ್ಥಳೀಯ ವಿಚಾರಣ ಸಮಿತಿಗಳ ಪಟ್ಟಿಗೆ ಮಾನ್ಯ ಕುಲಪತಿಯವರ ಅನುಮೋದನೆ ಪಡೆದುಕೊಂಡು ಸಂಯೋಜನಾ ಪ್ರಕ್ರಿಯೆ ನಡೆಸಲಾಗಿದ್ದು, ಸಂಯೋಜನಾ ಸಮಿತಿಯನ್ನು ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ ಎಂದರು.

ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000ರ ಪ್ರಕರಣ 59ರ ಪ್ರಕಾರ ಸ್ಥಳೀಯ ತಪಾಸಣಾ ಸಮಿತಿಗೆ ಸಿಂಡಿಕೇಟ್‌ನ ಅನುಮೋದನೆ ಪಡೆಯಬೇಕಾಗುತ್ತದೆ. ಪ್ರತಿ ವರ್ಷವೂ ಸಂಯೋಜನೆ ಪ್ರಕ್ರಿಯೆ ನಡೆಯುವುದರಿಂದ ಸರ್ಕಾರದ ಆದೇಶವನ್ನು ನಿರೀಕ್ಷಿಸದೇ ಸಾಕಷ್ಟು ಮುಂಚೆಯೇ ಪೂರ್ವ ಸಿದ್ಧತೆಗಳನ್ನು ಆರಂಭಿಸಬಹುದಾಗಿದೆ. ವಿಶ್ವವಿದ್ಯಾಲಯದಲ್ಲಿ ಯಾವಾಗಲೂ ಅಧ್ಯಾಪಕರ ಪಟ್ಟಿ ಲಭ್ಯವಿರುವುದರಿಂದ ತಪಾಸಣಾ ಸಮಿತಿಯನ್ನು ಮುಂಚಿತವಾಗಿಯೇ ಸಿದ್ಧಪಡಿಸಲು ಸಮಸ್ಯೆಯಿಲ್ಲ. ಕಾಲೇಜುಗಳಿಂದ ಸ್ವೀಕರಿಸುವ ಸಂಯೋಜನಾ ಅರ್ಜಿಗಳನ್ನು ಕೂಡ ಸಿಂಡಿಕೇಟ್ ಸಭೆಗೆ ಮಂಡಿಸಿ ಅನುಮೋದನೆ ಪಡೆಯಬೇಕೆಂದು ಕಾಯ್ದೆಯಲ್ಲಿದೆ. ವಿಶ್ವವಿದ್ಯಾಲಯದಲ್ಲಿ ಇದ್ಯಾವುದನ್ನೂ ಪಾಲಿಸುತ್ತಿಲ್ಲ. ಎಲ್ಲವನ್ನೂ ಘಟನೋತ್ತರ ಅನುಮೋದನೆ ಅಥವಾ ಸ್ಥಿರೀಕರಣಕ್ಕಾಗಿ ಮಂಡಿಸಲಾಗುತ್ತಿದೆ. ಇದು ಸರಿಯಾದ ಕ್ರಮವಲ್ಲ. ಇನ್ನು ಮುಂದೆ ಈ ರೀತಿ ಆಗದಂತೆ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮವನ್ನು ಪಾಲಿಸಬೇಕು. ತುರ್ತು ಅಗತ್ಯ ಇದ್ದಲ್ಲಿ ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆಯಬೇಕು ಎಂದರು.

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಕೆಲವು ಅಧ್ಯಾಪಕರು ಎರಡು ಮೂರು ಸಮಿತಿಗಳಲ್ಲಿ ಇದ್ದಾರೆ. ಶಾಸನಬದ್ಧ ಅಧಿಕಾರಿಯಾದ ಹಣಕಾಸು ಅಧಿಕಾರಿಗಳನ್ನು ಕೂಡ ಕೆಲವು ಸಮಿತಿಗಳಿಗೆ ನೇಮಕ ಮಾಡಲಾಗಿದೆ. ಇದರಿಂದ ಹಣಕಾಸು ವಿಭಾಗದಲ್ಲಿ ಕೆಲಸಕಾರ್ಯಗಳು ಸ್ಥಗಿತವಾಗುವುದಿಲ್ಲವೇ ಎಂದರು. ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಖಾಯಂ ಅಧ್ಯಾಪಕರ ಸಂಖ್ಯೆ ಕಡಿಮೆ ಇರುವುದರಿಂದ, ಕೆಲವು ಅಧ್ಯಾಪಕರು ಒಂದಕ್ಕಿಂತ ಹೆಚ್ಚಿನ ಸಮಿತಿಗಳಲ್ಲಿ ಇದ್ದಾರೆ ಎಂದರು. ಸಭೆಗೆ ವಿಶೇಷ ಆಹ್ವಾನಿತರಾಗಿದ್ದ ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರಾದ ಡಾ.ಗಜಾನನ ಪ್ರಭುರವರು ಮಾತನಾಡಿ ಸಮಿತಿ ಸಂಯೋಜನೆಗೆ ತೆರಳುವ ಒಂದು ದಿನ ಮುಂಚಿತವಾಗಿ ಮಾತ್ರ ಸದಸ್ಯರುಗಳಿಗೆ ಮಾಹಿತಿ ನೀಡಲಾಗುತ್ತದೆ. ಯಾವ ಸಮಿತಿ ಯಾವ ಕಾಲೇಜಿಗೆ ಹೋಗುತ್ತದೆ? ಸಮಿತಿಯಲ್ಲಿ ಯಾರು ಇರುತ್ತಾರೆ ಎಂಬ ಮಾಹಿತಿ ಕಾಲೇಜಿನವರಿಗೆ ಗೊತ್ತಿರುವುದಿಲ್ಲ. ಕೆಲವು ಸದಸ್ಯರು ಸಂಯೋಜನೆಗೆ ತೆರಳುವುದಿಲ್ಲ ಎಂದಾಗ ಬದಲಿಸಿ ಬೇರೆಯವರನ್ನು ನೇಮಕ ಮಾಡಲಾಗುತ್ತದೆ ಎಂದರು. ಶ್ರೀ.ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಇದು ವಿಶ್ವವಿದ್ಯಾಲಯದ ಕೆಲಸವಾಗಿದ್ದು, ಯುಜಿಸಿ ನಿಯಮಗಳನ್ವಯ ಶೈಕ್ಷಣಿಕ ಚಟುವಟಿಕೆಯ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಒಂದು ಭಾಗ. ಯಾರೂ ನಿರಾಕರಿಸುವಂತಿಲ್ಲ. ಹೋಗಲು ನಿರಾಕರಿಸುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಸ್ಥಳೀಯ ತಪಾಸಣಾ ಸಮಿತಿಗಳಿಗೆ ಸ್ನಾತಕ ಅಧ್ಯಾಪಕರುಗಳನ್ನು ಕೂಡ ಪರಿಗಣಿಸಿದಲ್ಲಿ ಹೆಚ್ಚಿನ ಅಧ್ಯಾಪಕರು ಸಿಗುತ್ತಾರೆ. ಅವರೂ ಕೂಡ ಪರಿಣಿತರಿದ್ದಾರೆ. ಸೇವಾ ಅನುಭವ ಮತ್ತು ಜೇಷ್ಠತೆಯನ್ನು ಪರಿಗಣಿಸಿ ನೇಮಕ ಮಾಡಿದಲ್ಲಿ ಸಂಯೋಜನಾ ಕಾರ್ಯವನ್ನು ಕೂಡ ನಿಗದಿತ ಅವಧಿಯಲ್ಲಿ ಮುಗಿಸಬಹುದು ಎಂದರು.

ಪ್ರೊ. ಸಾಕಮ್ಮ ಬಿ.ರವರು ಮಾತನಾಡಿ, ಸಂಯೋಜನಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಕೂಡ ನೇಮಕ ಮಾಡಬೇಕು ಎಂದರು. ಶ್ರೀ ಬಿ.ಎಸ್.ಶಶಿಧರ್‌ರವರು ಮಾತನಾಡಿ, ಸಂಯೋಜನಾ ಸಮಿತಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಬೇಕು ಎಂದು ಈ ಹಿಂದೆ ಸರ್ಕಾರದಿಂದ ಆದೇಶ ಆಗಿತ್ತು. ನಂತರ, ಸದರಿ ಆದೇಶವನ್ನು ಸರ್ಕಾರ ಹಿಂಪಡೆಯಿತು. ಆದೇಶವನ್ನು ಹಿಂಪಡೆದ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಸರ್ಕಾರದ ಆದೇಶಕ್ಕೆ ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ. ಆದುದರಿಂದ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಬಹುದು ಎಂದರು.

ಕುಲಸಚಿವರು ಮಾತನಾಡಿ, ಈ ಕುರಿತಾಗಿ, ಸರ್ಕಾರದ ಸ್ಪಷ್ಟೀಕರಣ ಕೋರಿ ಪತ್ರ ಬರೆಯಲಾಗುವುದು. ಸರ್ಕಾರವು ಅನುಮತಿಸಿದಲ್ಲಿ ಮುಂದಿನ ವರ್ಷದಿಂದ ಪರಿಗಣಿಸಲಾಗುವುದು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, 2026–27ನೇ ಸಾಲಿನ ಸಂಯೋಜನಾ ಕಾರ್ಯಕ್ಕಾಗಿ ರಚಿಸಿದ್ದ ಸ್ಥಳೀಯ ವಿಚಾರಣಾ ಸಮಿತಿಯನ್ನು ಘಟನೋತ್ತರವಾಗಿ ಅನುಮೋದಿಸಿದ ಸಭೆಯು, ಇನ್ನು ಮುಂದೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000ರ ಪ್ರಕರಣ 59ರ ಪ್ರಕಾರ ಸಿಂಡಿಕೇಟ್ ಅನುಮೋದನೆ ಪಡೆದುಕೊಂಡು ಸಂಯೋಜನಾ ಪ್ರಕ್ರಿಯೆ ಆರಂಭಿಸಬೇಕು ಮತ್ತು ಸಿಂಡಿಕೇಟ್ ಸದಸ್ಯರನ್ನು ಸಂಯೋಜನಾ ಸಮಿತಿಗಳಿಗೆ ನೇಮಿಸುವ ಬಗ್ಗೆ ಸ್ಪಷ್ಟನೆ ಕೋರಿ ಸರ್ಕಾರಕ್ಕೆ ಪತ್ರ ಬರೆಯಬೇಕೆಂದು ನಿರ್ಣಯಿಸಿತು.

## ಎಸ್ಟೇಟ್ ವಿಭಾಗ

**2026–ಸಿಂ–1.14:** ಸ್ವಚ್ಛತಾ ಕಾರ್ಯಕ್ಕಾಗಿ ಬೇಕಾಗುವ ಸ್ವಚ್ಛತಾ ಸಾಮಗ್ರಿ/ಇತರೆ ಪರಿಕರಗಳ ಪೂರೈಕೆಗಾಗಿ ಅಲ್ಪಾವಧಿಯ ಟೆಂಡರ್ ಕರೆದಿರುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಜ್ಞಾನ ಸಹ್ಯಾದ್ರಿ ಆವರಣ, ಘಟಕ ಕಾಲೇಜುಗಳು ಮತ್ತು ಕಡೂರು/ಚಿಕ್ಕಮಗಳೂರು ಸ್ನಾತಕೋತ್ತರ ಕೇಂದ್ರಗಳಿಗೆ ಸ್ವಚ್ಛತಾ ಕಾರ್ಯಕ್ಕಾಗಿ ಅಗತ್ಯವಿರುವ ಸ್ವಚ್ಛತಾ ಸಾಮಗ್ರಿ/ಪರಿಕರಗಳನ್ನು ಸರಬರಾಜು ಮಾಡಿ ಎರಡು ವರ್ಷಗಳ ಅವಧಿಗೆ ದರ ಒಪ್ಪಂದ ಮಾಡಿಕೊಳ್ಳುವ ಸಲುವಾಗಿ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ–ಟೆಂಡರ್ ಆಹ್ವಾನಿಸಿದ್ದು, ಟೆಂಡರ್‌ನಲ್ಲಿ ಮೂರು ಸಂಸ್ಥೆಗಳು ಪಾಲ್ಗೊಂಡಿದ್ದವು. ಒಂದು ಸಂಸ್ಥೆಯು ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹತೆ ಪಡೆಯಲಿಲ್ಲ. ಅರ್ಹತೆ ಪಡೆದ ಉಳಿದೆರಡು ಸಂಸ್ಥೆಗಳಲ್ಲಿ ಶ್ರೀ ಮಲ್ಲೇಶ್ವರ ಪ್ರಿಂಟರ್ಸ್ ಅಂಡ್ ಎಂಟರ್‌ಪ್ರೈಸಸ್, ಭದ್ರಾವತಿ ಇವರು ಕಡಿಮೆ ದರ ನಮೂದಿಸಿ ಎಲ್–1 ಆಗಿದ್ದರು. ಅವರು ಹಣಕಾಸಿನ ಬಿಡ್‌ನಲ್ಲಿ ನಮೂದಿಸಿದ್ದ ದರಗಳು ತುಸು ಹೆಚ್ಚು ಎನಿಸಿದ್ದರಿಂದ, ಅವರೊಂದಿಗೆ ಟೆಂಡರ್ ಪರಿಶೀಲನಾ ಸಮಿತಿಯವರು ದರಸಂಧಾನ ನಡೆಸಿದ ನಂತರ ಸೂಚಿತ ಬಿಡ್‌ದರಗಳ ಮೇಲೆ ಶೇ.2ರಷ್ಟು ರಿಯಾಯಿತಿ ನೀಡಲು ಒಪ್ಪಿರುತ್ತಾರೆ. ಹಳೆಯ ಟೆಂಡರ್‌ನ ಅವಧಿಯು ದಿನಾಂಕ:30–06–2025ರಂದು ಮುಕ್ತಾಯವಾಗಿದ್ದು, ಸ್ವಚ್ಛತಾ ಕಾರ್ಯಕ್ಕೆ ಸಾಮಗ್ರಿಗಳ ತುರ್ತು ಅಗತ್ಯವಿದ್ದುದ್ದರಿಂದ, ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಯವರ ಅನುಮೋದನೆಯನ್ನು ಪಡೆದುಕೊಂಡು ಕಾರ್ಯಾದೇಶ ನೀಡಲಾಗಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಶ್ರೀ ಶಶಿಧರ ಬಿ.ಎಸ್.ರವರು ಮಾತನಾಡಿ, ಹಿಂದಿನ ಹಲವಾರು ಸಭೆಗಳಲ್ಲಿ ತಿಳಿಸಿದ್ದಾಗ್ಯೂ ಸಿಂಡಿಕೇಟ್ ಅನುಮೋದನೆ ಪಡೆಯದೇ ಸ್ಥಿರೀಕರಣಕ್ಕಾಗಿ ಮಂಡಿಸುತ್ತಿರುವುದು ಸರಿಯಾದ ಕ್ರಮವಲ್ಲ. ಅಲ್ಲದೇ, ಇದರ ಟೆಂಡರ್‌ನ ಮೊತ್ತ ರೂ.20.00ಲಕ್ಷಗಳಿರುವುದರಿಂದ, ಟೆಂಡರ್ ಕರೆಯುವ ಮುನ್ನವೇ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಬೇಕಾಗಿತ್ತು ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ರೂ.5.00ಲಕ್ಷಗಳಿಗಿಂತ ಕಡಿಮೆ ಇದ್ದಲ್ಲಿ ಆಡಳಿತಾಂಗವೇ ನಿರ್ಣಯಿಸಿ ಕ್ರಮಕೈಗೊಳ್ಳಬಹುದು. ರೂ.5.00ಲಕ್ಷಗಳಿಗಿಂತ ಜಾಸ್ತಿ ಇದ್ದಲ್ಲಿ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಬಹುದು ಎಂದರು. ಶ್ರೀ ಶಾಂತಕುಮಾರ್‌ರವರು ಮಾತನಾಡಿ, ತುರ್ತು ಅಗತ್ಯವಿದ್ದಲ್ಲಿ ವಿಶೇಷ ಸಿಂಡಿಕೇಟ್ ಸಭೆ ಕರೆಯಬಹುದು ಎಂದರು.

ಪ್ರೊ. ಸಾಕಮ್ಮ ಬಿ. ರವರು ಮಾತನಾಡಿ, ಇಂಜಿನಿಯರಿಂಗ್ ವಿಭಾಗದವರು ಈ ಹಿಂದೆ ಸುಮಾರು ರೂ.2.00 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳನ್ನು ರೂ.5.00ಲಕ್ಷಗಳಿಗೆ ಸೀಮಿತಗೊಳಿಸಿ ಪೀಸ್‌ವರ್ಕ್ ಮಾಡಿದ್ದಾರೆ. ಇದರ ಬದಲು ಎಲ್ಲಾ ಕಾಮಗಾರಿಗಳೂ ಸೇರಿದಂತೆ ಒಂದು ಇ–ಟೆಂಡರ್ ಮಾಡಬಹುದಿತ್ತು ಎಂದರು. ಕುಲಸಚಿವರು ಮಾತನಾಡಿ, ಇನ್ನು ಮುಂದೆ ಇ–ಟೆಂಡರ್ ಮಾಡುವ ಕಾಮಗಾರಿಗಳನ್ನು ಪಟ್ಟಿಮಾಡಿ ವಿವರಗಳೊಂದಿಗೆ ಸಿಂಡಿಕೇಟ್ ಅನುಮೋದನೆ ಪಡೆದುಕೊಂಡು ಟೆಂಡರ್ ಕರೆಯಲಾಗುವುದು ಎಂದರು.

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಕೆಲವು ಸರಕುಗಳ ದರಗಳು ಮಾರುಕಟ್ಟೆಗಿಂತ ತುಂಬಾ ಜಾಸ್ತಿ ಇವೆ. ಇದರಿಂದ ವಿಶ್ವವಿದ್ಯಾಲಯಕ್ಕೆ ಆರ್ಥಿಕ ನಷ್ಟವಾಗುತ್ತದೆ. ಆದುದರಿಂದ ದರ ಹೆಚ್ಚಿರುವ ಸರಕುಗಳಿಗೆ ಸಂಬಂಧಪಟ್ಟಂತೆ, ಮಾರುಕಟ್ಟೆಯ ದರಗಳನ್ನು ಪಡೆದುಕೊಂಡು, ತುಂಬಾ ವ್ಯತ್ಯಾಸವಿದ್ದಲ್ಲಿ ಟೆಂಡರ್ ಪರಿಶೀಲನಾ ಸಮಿತಿಯ ಮೂಲಕ ಪರಿಶೀಲಿಸಿ ಪರಿಷ್ಕರಿಸುವ ಬಗ್ಗೆ ವರದಿ ಪಡೆಯಿರಿ ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ದರಗಳ ಮಾಹಿತಿ ಪಡೆದು ಆಡಳಿತಾಂಗದವರೇ ನಿರ್ಣಯಿಸಿ ಮುಂದೆ, ನಡಾವಳಿಯ ಮೇಲೆ ಕೈಗೊಂಡ ಕ್ರಮದ ವರದಿಯಲ್ಲಿ (Action Taken) ಮಾಹಿತಿ ಒದಗಿಸಿ ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ಮೇಲಿನ ಚರ್ಚೆಯಲ್ಲಿ ನಿರ್ಣಯಿಸಿದಂತೆ ವಿಶ್ವವಿದ್ಯಾಲಯಕ್ಕೆ ಸ್ವಚ್ಛತಾ ಕಾರ್ಯಕ್ಕಾಗಿ ಅಗತ್ಯವಿರುವ ಸ್ವಚ್ಛತಾ ಸಾಮಗ್ರಿ/ಇತರೆ ಪರಿಕರಗಳ ಪೂರೈಕೆಗಾಗಿ ನಡೆಸಲಾದ ಇ–ಟೆಂಡರ್ ಪ್ರಕ್ರಿಯೆಯನ್ನು ಘಟನೋತ್ತರವಾಗಿ ಅನುಮೋದಿಸಿ ಸ್ಥಿರೀಕರಿಸಿದ ಸಭೆಯು, ದರ ಹೆಚ್ಚಿರುವ ಕೆಲವು ಸರಕುಗಳಿಗೆ ಸಂಬಂಧಪಟ್ಟಂತೆ, ಮಾರುಕಟ್ಟೆಯ ದರಗಳನ್ನು ಪಡೆದುಕೊಂಡು, ಅಧಿಕ ವ್ಯತ್ಯಾಸವಿದ್ದಲ್ಲಿ ಪರಿಶೀಲಿಸಿ, ಪರಿಷ್ಕರಿಸುವಂತೆ ಹಾಗೂ ಇನ್ನು ಮುಂದೆ ಇ–ಟೆಂಡರ್ ಕರೆಯುವ ಮುನ್ನ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಬೇಕೆಂದು ನಿರ್ಣಯಿಸಿತು.

## ಶೈಕ್ಷಣಿಕ ವಿಭಾಗ

**2026–ಸಿಂ–1.15:** "ಡಾ. ಗೌಡಗೆರೆ ನಾರಾಯಣರಾವ್, ಗೋಲ್ಡ್ ಮೆಡಲ್" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದತ್ತಿನಿಧಿ ಸ್ವರ್ಣಪದಕ ದಾನಿಗಳಾದ ಶ್ರೀಮತಿ ಎಂ.ಎನ್.ಗೀತಾ ಬಿನ್ ಡಾ.ಜಿ.ನಾರಾಯಣರಾವ್, ಶಿವಮೊಗ್ಗ ಇವರು "Dr. Goudagere Narayana Rao Gold Medal" ಹೆಸರಿನಲ್ಲಿ 2024–25ನೇ (35ನೇ ಘಟಿಕೋತ್ಸವದಿಂದ) ಶೈಕ್ಷಣಿಕ ಸಾಲಿನಿಂದ **ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ** ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

**2026–ಸಿಂ–1.15(ಎ):** "Smt. Eeramma & Sri Baluru Halappa K., Hithala Village, Shikaripura Tq. Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ನಿರ್ಣಯ: ದತ್ತಿನಿಧಿ ಸ್ವರ್ಣಪದಕ ದಾನಿಗಳಾದ ಡಾ.ಕೆ.ಪ್ರಸನ್ನಕುಮಾರ್ ಬಿನ್ ಕೆ.ಹಾಲಪ್ಪ, ಶಿವಮೊಗ್ಗ ಇವರು "Smt. Eeramma & Sri Baluru Halappa, K., Hithala Village, Shikaripura Tq. Gold Medal" ಹೆಸರಿನಲ್ಲಿ 2024–25ನೇ (35ನೇ ಘಟಿಕೋತ್ಸವದಿಂದ) ಶೈಕ್ಷಣಿಕ ಸಾಲಿನಿಂದ **ಕುವೆಂಪು ವಿಶ್ವವಿದ್ಯಾಲಯದ ಸ್ನಾತಕ ಪದವಿಯ ಬಿ.ಎ. ರಾಜ್ಯಶಾಸ್ತ್ರ ವಿಷಯದಲ್ಲಿ (I to VI Semester, ಮೊದಲ ಪ್ರಯತ್ನದಲ್ಲಿ) ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ** ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು, ಪದಕದ ದಾನಿಗಳನ್ನು ಅಭಿನಂದಿಸಿತು.

**2026–ಸಿಂ–1.15(ಬಿ):** "Smt. Rasheeda Begum and Sri Syed Dastagir Gold Medal" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: ದತ್ತಿನಿಧಿ ಸ್ವರ್ಣಪದಕ ದಾನಿಗಳಾದ ಡಾ.ಸೈಯದ್ ಸನಾವುಲ್ಲಾ, ಶಿವಮೊಗ್ಗ ಇವರು "Smt. Rasheeda Begum and Sri Syed Dastagir Gold Medal" ಹೆಸರಿನಲ್ಲಿ 2024–25ನೇ (35ನೇ ಘಟಿಕೋತ್ಸವದಿಂದ) ಶೈಕ್ಷಣಿಕ ಸಾಲಿನಿಂದ **ಕುವೆಂಪು ವಿಶ್ವವಿದ್ಯಾಲಯದ ಸ್ನಾತಕ ಪದವಿಯ ಎಲ್ಲಾ ಕೋರ್ಸ್‌ನ ಉರ್ದು ಭಾಷೆಯಲ್ಲಿ (I to IV Semester, ಮೊದಲ ಪ್ರಯತ್ನದಲ್ಲಿ) ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ** ದತ್ತಿನಿಧಿ ಸ್ವರ್ಣ ಪದಕ ನೀಡಲು ಅನುಮೋದನೆ ನೀಡಿದ ಸಭೆಯು ಪದಕದ ದಾನಿಗಳನ್ನು ಅಭಿನಂದಿಸಿತು.

## ಹಣಕಾಸು ವಿಭಾಗ

**2026–ಸಿಂ–1.16:** 2025–26ನೇ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

ಚರ್ಚೆ: ಸಭೆಗೆ ವಿಶೇಷ ಆಹ್ವಾನಿತರಾಗಿದ್ದ ಹಣಕಾಸು ಅಧಿಕಾರಿಗಳಾದ ಪ್ರೊ.ಹೆಚ್.ಎನ್.ರಮೇಶ್ ರವರು ದಿನಾಂಕ:10–10–2025ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯವನ್ನು ಮುಂದೂಡಲಾಗಿತ್ತು. ಈ ಹಿನ್ನೆಲೆಯಲ್ಲಿ 2025–26ನೇ ಸಾಲಿನ ಆರಂಭಿಕ ಮೂರು ತಿಂಗಳುಗಳ ಸ್ವೀಕೃತಿ ಮತ್ತು ಪಾವತಿಗಳ ವಿವರಗಳನ್ನು ಇದರೊಂದಿಗೆ ಒದಗಿಸಲಾಗಿದ್ದು, ದಿನಾಂಕ:16–9–2025ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸುವಂತೆ ಕೋರಿದರು.

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಪ್ರತಿ ವರ್ಷ ಪ್ರಶ್ನೆಪತ್ರಿಕೆಗಳ ಮುದ್ರಣಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡುವ ಬದಲು ವಿಶ್ವವಿದ್ಯಾಲಯದಲ್ಲಿಯೇ ಮುದ್ರಿಸುವ ವ್ಯವಸ್ಥೆ ಮಾಡಬಹುದು ಎಂದರು. ಇದರಿಂದ ಸಾಕಷ್ಟು ಹಣ ಉಳಿತಾಯವಾಗುತ್ತದೆ ಎಂದರು. ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ಪ್ರಶ್ನೆಪತ್ರಿಕೆಯ ಜೊತೆಗೆ ವಿಶ್ವವಿದ್ಯಾಲಯದ ವಿವಿಧ ಮುದ್ರಣ ಕಾರ್ಯಗಳನ್ನು ಕೂಡ ಇಲ್ಲಿಂದಲೇ ಮಾಡಿಸಬಹುದು ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಇದಕ್ಕಾಗಿ ಪ್ರತ್ಯೇಕವಾದ ಮುದ್ರಣಾಲಯ ಮತ್ತು ಬಹಳಷ್ಟು ಯಂತ್ರೋಪಕರಣಗಳನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಬೇಕು. ಅಲ್ಲದೇ ಇದಕ್ಕಾಗಿಯೇ ಪರಿಣಿತ ಸಿಬ್ಬಂದಿಗಳ ಅಗತ್ಯವಿದೆ ಎಂದರು.

ಶ್ರೀ ಮುಸಾವೀರ್ ಬಾಷಾ ಸಹ್ಯಾದ್ರಿ ಕಾಲೇಜಿನ ಪಾಥ್‌ವೇಸ್‌ನಲ್ಲಿ ಉತ್ತಮ ಕಾರ್ಯಕ್ರಮಗಳು ಆಗುತ್ತಿದ್ದು, ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದೆ. ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಕೂಡ ಪಾಥ್‌ವೇಸ್‌ನ್ನು ಸಹ್ಯಾದ್ರಿ ಕಾಲೇಜಿನ ಮಾದರಿಯಲ್ಲಿ ಕ್ರಿಯಾಶೀಲಗೊಳಿಸಿದರೆ ಹೆಚ್ಚು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ ಸಹ್ಯಾದ್ರಿ ಕಾಲೇಜಿನ ಪಾಥ್‌ವೇಸ್‌ಗೆ ಹೆಚ್ಚಿನ ಅನುದಾನ ಒದಗಿಸಿದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಮತ್ತು ಕಾಲೇಜಿಗೆ ಉತ್ತಮ ಹೆಸರು ಬರುವುದರಿಂದ ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಾರೆ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಹಣಕಾಸು ಅಧಿಕಾರಿಗಳು ಮಾತನಾಡಿ, ವಿಶ್ವವಿದ್ಯಾಲಯದ ಆವರಣದಲ್ಲಿ ಕೂಡ ಪಾಥ್‌ವೇಸ್ ಘಟಕ ಇದೆ. ಅಲ್ಲದೇ, ಇತ್ತೀಚೆಗೆ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವನ್ನು ಕೂಡ ಆರಂಭಿಸಲಾಗಿದೆ ಎಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿರುವ ಕೆಲವು ಅಧ್ಯಯನ ಪೀಠಗಳು ಕ್ರಿಯಾಶೀಲವಾಗಿಲ್ಲ. ಆದುದರಿಂದ, ನಿಷ್ಕ್ರಿಯ ಅಥವಾ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಕಾರ್ಯಕ್ರಮಗಳನ್ನು ನಡೆಸದ ಅಧ್ಯಯನ ಪೀಠಗಳಿಗೆ ಆಸಕ್ತಿ ಇರುವ ಅಧ್ಯಾಪಕರನ್ನು ನೇಮಕ ಮಾಡಿ ಕ್ರಿಯಾಶೀಲಗೊಳಿಸಬೇಕು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, ದಿನಾಂಕ:16–09–2025ರಂದು ನಡೆದ 2025–26ನೇ ಸಾಲಿನ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು ಮತ್ತು ಸದಸ್ಯರು ಚರ್ಚೆಯಲ್ಲಿ ನೀಡಿರುವ ಸಲಹೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2026–ಸಿಂ–1.17:** 2026–27ನೇ ಸಾಲಿನಲ್ಲಿ ವಯೋ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ 2026–27ನೇ ಸಾಲಿನಲ್ಲಿ ಈ ಕೆಳಕಂಡ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರು ವಯೋನಿವೃತ್ತಿ ಹೊಂದಲು ಅನುಮತಿ ನೀಡಲಾಯಿತು.

| ಕ್ರ ಸಂ. | ಹೆಸರು ಮತ್ತು ಹುದ್ದೆ ಡಾ/ಶ್ರೀ/ಶ್ರೀಮತಿ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನಿವೃತ್ತಿ ದಿನಾಂಕ |
|---|---|---|---|---|
| | ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು/ಘಟಕ ಮತ್ತು ನೇರ ಆಡಳಿತಕ್ಕೆ ಒಳಪಟ್ಟ ಕಾಲೇಜುಗಳ ಅಧ್ಯಾಪಕರುಗಳು | | | |
| 01 | ಡಾ ಪದ್ಮಮ್ಮ, ಎಸ್., ಹಿರಿಯ ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ | 06–05–1964 | 04–06–1998 | 31–05–2026 |
| 02 | ಡಾ ನಮ್ರತ, ಎಂ., ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ | 21–05–1964 | 25–05–1998 | 31–05–2026 |
| 03 | ಡಾ ಕೃಪಾಲಿನಿ, ಹೆಚ್. ಎಸ್., ಸಹ ಪ್ರಾಧ್ಯಾಪಕರು, ಸಹ್ಯಾದ್ರಿ ಕಲಾ ಕಾಲೇಜು | 20–05–1964 | 15–07–2009 | 31–05–2026 |
| 04 | ಶ್ರೀ ಮೌನೇಶ್, ಕೆ. ಎಂ., ಸಹಾಯಕ ಪ್ರಾಧ್ಯಾಪಕರು, ಸಹ್ಯಾದ್ರಿ ವಿಜ್ಞಾನ ಕಾಲೇಜು | 04–05–1964 | 07–01–2004 | 31–05–2026 |
| 05 | ಡಾ ಎಸ್. ಎಸ್. ಪಾಟೀಲ್, ಹಿರಿಯ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ | 19–06–1964 | 15–09–2008 | 30–06–2026 |
| 06 | ಡಾ ಪ್ರಸನ್ನಕುಮಾರ್, ಪ್ರಾಧ್ಯಾಪಕರು ಸಹ್ಯಾದ್ರಿ ಕಲಾ ಕಾಲೇಜು | 21–07–1964 | 07–01–2004 | 31–07–2026 |
| 07 | ಡಾ ಗೋಪಾಲ್, ಟಿ.ಡಿ., ಸಹಾಯಕ ಪ್ರಾಧ್ಯಾಪಕರು, ಸಹ್ಯಾದ್ರಿ ವಿಜ್ಞಾನ ಕಾಲೇಜು | 13–07–1964 | 28–10–2011 | 31–07–2026 |
| 08 | ಡಾ ಬಾಲಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, | 28–11–1964 | 03–11–2011 | 31–11–2026 |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

| | | | | |
|---|---|---|---|---|
| 09 | ಡಾ ಶ್ರೀಕಂಠ, ಎಸ್.ಎ., ಪ್ರಾಧ್ಯಾಪಕರು, ಸಹ್ಯಾದ್ರಿ ವಿಜ್ಞಾನ ಕಾಲೇಜು | 13-01-1965 | 26-3-2004 | 31-01-2027 |
| 10 | ಡಾ ರಮೇಶ್‌ಬಾಬು, ಹೆಚ್. ಎನ್., ಪ್ರಾಧ್ಯಾಪಕರು,ಸಹ್ಯಾದ್ರಿ ವಿಜ್ಞಾನ ಕಾಲೇಜು. | 29-03-1965 | 02-12-1996 | 31-03-2027 |
| | ಅಧ್ಯಾಪಕೇತರ ಅಧಿಕಾರಿ / ನೌಕರರು | | | |
| 01 | ಶ್ರೀಮತಿ ಟಿ. ನವರತ್ನ, ಉಪ ಕುಲಸಚಿವರು | 20-04-1966 | 02-11-1989 | 30-04-2026 |
| 02 | ಶ್ರೀ ಗೋಪಾಲ್, ಆರ್., ಕಿರಿಯ ಸಹಾಯಕರು | 06-04-1966 | 19-01-2006 | 30-04-2026 |
| 03 | ಶ್ರೀ ಮೂರ್ತಿ, ಹೆಚ್., ಪ್ರಥಮ ದರ್ಜೆ ಸಹಾಯಕರು | 16-04-1966 | 06-08-1994 | 30-04-2026 |
| 04 | ಶ್ರೀ ಚಂದ್ರಕಾಂತ, ಎಂ., ಉಪ ಕುಲಸಚಿವರು | 30-05-1966 | 18-06-1990 | 31-05-2026 |
| 05 | ಶ್ರೀ ಗೋವಿಂದಾಚಾರಿ, ಶಾಖಾಧಿಕಾರಿ | 01-06-1966 | 03-01-1990 | 31-05-2026 |
| 06 | ಶ್ರೀ ಭೋಗರಾಜ್, ಹೆಚ್. ಎನ್., ಶಾಖಾಧಿಕಾರಿ | 06-05-1966 | 30-06-1989 | 31-05-2026 |
| 07 | ಶ್ರೀಮತಿ ಸುಶೀಲ, ಎನ್., ಹಿರಿಯ ಸಹಾಯಕರು | 20-05-1966 | 05-08-1994 | 31-05-2026 |
| 08 | ಶ್ರೀ ಲೋಕೇಶ್, ಹೆಚ್. ಡಿ., ಪ್ರಥಮ ದರ್ಜೆ ಸಹಾಯಕರು | 01-06-1966 | 04-01-1990 | 31-05-2026 |
| 09 | ಶ್ರೀ ಕುಮಾರ್, ಜಿ. ಎಂ., ಕಿರಿಯ ಸಹಾಯಕರು | 01-06-1966 | 19-01-2006 | 31-05-2026 |
| 10 | ಶ್ರೀ ಶಾಹಿದ್ ಬಾಷ, ಅಟೆಂಡರ್ | 20-05-1966 | 06-01-1990 | 31-05-2026 |
| 11 | ಶ್ರೀ ಹೆಚ್. ಎಂ. ಶಾಂತಪ್ಪ, ಅಟೆಂಡರ್ | 01-06-1966 | 01-07-1987 | 31-05-2026 |
| 12 | ಶ್ರೀ ಲಕ್ಷ್ಮಣ, ಕೆ., ಜವಾನ ಮತ್ತು ಕಾವಲುಗಾರ | 01-06-1966 | 19-01-2006 | 31-05-2026 |
| 13 | ಶ್ರೀ ಕೃಷ್ಣಮೂರ್ತಿ, ಜಿ. ಎಸ್., ಸಹಾಯಕ ಕುಲಸಚಿವರು | 11-06-1966 | 11-08-1994 | 30-06-2026 |
| 14 | ಶ್ರೀಮತಿ ಗಾಯಿತ್ರಿ, ಎ., ಹಿರಿಯ ಸಹಾಯಕರು | 14-06-1966 | 19-05-1995 | 30-06-2026 |
| 15 | ಶ್ರೀ ಯೋಗಿರಾಜ, ಪ್ರಥಮ ದರ್ಜೆ ಸಹಾಯಕರು | 17-06-1966 | 10-11-1994 | 30-06-2026 |
| 16 | ಶ್ರೀ ಶಂಕರ್, ಅಟೆಂಡರ್ | 10-06-1966 | 18-06-1990 | 30-06-2026 |
| 17 | ಶ್ರೀಮತಿ ವೀಣಾ, ಹೆಚ್. ವಿ., ಶಾಖಾಧಿಕಾರಿ | 02-07-1966 | 07-08-1989 | 31-07-2026 |
| 18 | ಶ್ರೀ ಸುರೇಶ್ ಪಂಡಿತ್, ಎಸ್., ವಾಹನ ಚಾಲಕರು | 18-07-1966 | 01-06-1993 | 31-07-2026 |
| 19 | ಶ್ರೀ ದಿವಾಕರ, ಎನ್., ಅಟೆಂಡರ್ | 10-07-1966 | 11-08-1994 | 31-07-2026 |
| 20 | ಡಾ ವಾಲ್ಮೀಕಿ, ಆರ್, ಹೆಚ್., ಗ್ರಂಥಪಾಲಕರು (ಪ್ರಭಾರ) | 21-09-1966 | 06-10-1994 | 31-09-2026 |
| 21 | ಶ್ರೀ ಗುರುರಾಜ, ಆರ್.ಜಿ., ಅಟೆಂಡರ್ | 09-01-1967 | 03-01-1990 | 31-01-2027 |
| 22 | ಶ್ರೀಮತಿ ಕಲ್ಯಾಣಿ, ಸ್ವೀಪರ್ | 25-02-1967 | 22-01-2013 | 28-02-2027 |
| 23 | ಶ್ರೀ ಸೈಯದ್ ಅನ್ವರ್ ಅಹ್ಮದ್, ಕಿರಿಯ ಸಹಾಯಕರು | 22-03-1967 | 03-01-1995 | 31-03-2027 |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

**2026–ಸಿಂ–1.18:** Internal Compliance Committee ನೀಡಿರುವ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ಡಾ.ಮಾಲಾ ಹೆಚ್.ಜಿ. ಎಂಬುವವರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಎಸ್.ಎನ್.ಯೋಗೀಶ್‌ರವರ ವಿರುದ್ಧ ಸಲ್ಲಿಸಿದ್ದ ದೂರಿನ ಕುರಿತು ಪರಿಶೀಲಿಸಲು ಪ್ರೊ.ಪದ್ಮಮ್ಮ ಎಸ್. ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಶ್ರೀ ಸುಕಲಕ್ಷ ಪಾಲನ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು, ಶ್ರೀಮತಿ ಸ್ಮಿತಾ ಹುಲಿರಾಜ್, ವಕೀಲರು, ಶಿವಮೊಗ್ಗ, ಶ್ರೀಮತಿ ಸುರೇಖಾ ಮುರಳೀಧರ್, ಮಹಾನಗರಪಾಲಿಕೆಯ ಮಾಜಿ ಸದಸ್ಯರು, ಶಿವಮೊಗ್ಗ, ಶ್ರೀಮತಿ ಪುಷ್ಪಾ ಎಸ್. ಶೆಟ್ಟಿ, ಸಾಮಾಜಿಕ ಕಾರ್ಯಕರ್ತರು, ಶಿವಮೊಗ್ಗ ಹಾಗೂ ಶ್ರೀಮತಿ ಸುಮನ್ ಎ. ಆಚಾರ್, ಉಪಕುಲಸಚಿವರು/ ಪ್ರಾಧಿಕಾರ ವಿಭಾಗ ಇವರನ್ನೊಳಗೊಂಡ Internal Compliance Committee ನ್ನು ಸರ್ಕಾರದ ನಿರ್ದೇಶನದ ಮೇರೆಗೆ ರಚಿಸಲಾಗಿತ್ತು. ಸಮಿತಿಯು ವಿಶ್ವವಿದ್ಯಾಲಯಕ್ಕೆ ದಿನಾಂಕ:02–12–2025 ರಂದು ಸಲ್ಲಿಸಿರುವ ತನ್ನ ಅಂತಿಮ ವರದಿಯಲ್ಲಿ "ಡಾ. ಮಾಲಾ ಹೆಚ್.ಜಿ. ಇವರು ಈ ಹಿಂದೆ ಲಿಖಿತ ದೂರಿನಲ್ಲಿ ಕೊಟ್ಟಿರುವಂತಹ ಆರೋಪಗಳ ಬಗ್ಗೆ ಪೂರಕವಾದಂತಹ ಯಾವುದೇ ರೀತಿಯ ಸಾಕ್ಷ್ಯಾಧಾರಗಳು ಇಲ್ಲದಿರುವುದರಿಂದ ಕೇವಲ ಆಕೆಯ ಒಬ್ಬಳ ಹೇಳಿಕೆಯನ್ನೇ ಪರಿಗಣಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ, ಈ ಹಿಂದಿನ ದಾಖಲೆಗಳು ಮತ್ತು ಚರ್ಚೆಗಳನ್ನು ಪರಿಗಣಿಸಿ, ಈ ಪ್ರಕರಣದಲ್ಲಿ ಯಾವುದೇ ರೀತಿಯ ಸತ್ಯಾಂಶಗಳು ಇದೆಯೆಂದು **ಮನದಟ್ಟು ಆಗದೇ ಇರುವ ಕಾರಣ** ಈ ಪ್ರಕರಣವನ್ನು ಇಲ್ಲಿಗೆ ಮುಕ್ತಾಯಗೊಳಿಸಲು ಸಭೆಯು ತೀರ್ಮಾನಿಸಿರುತ್ತದೆ." ಎಂದು ತಿಳಿಸಿರುತ್ತಾರೆ. ಆದುದರಿಂದ, ಸರ್ಕಾರಕ್ಕೆ ವರದಿ ಮಾಡುವ ಸಲುವಾಗಿ ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

ಪ್ರೊ. ಸಾಕಮ್ಮ ಬಿ. ರವರು ಮಾತನಾಡಿ, ಇದು ಬಹಳ ಹಳೆಯ ಪ್ರಕರಣ. ಈ ಹಿಂದೆ ರಾಜ್ಯದ ಬೇರೊಂದು ವಿಶ್ವವಿದ್ಯಾಲಯದಲ್ಲಿ ಇಂತಹದೇ ಪ್ರಕರಣ ವರದಿಯಾದಾಗ ತಕ್ಷಣವೇ ಕ್ರಮ ಕೈಗೊಂಡಿದ್ದಾರೆ. ನಮ್ಮ ವಿಶ್ವವಿದ್ಯಾಲಯದಲ್ಲಿ ಈ ಪ್ರಕರಣದ ದೂರು ಸಲ್ಲಿಕೆಯಾದ ನಂತರ ಮೂವರು ಕುಲಪತಿಗಳು ಬದಲಾಗಿದ್ದಾರೆ. ಈಗ ಅಂತಿಮ ವರದಿ ಬಂದಿದೆ. ಕ್ರಮ ಕೈಗೊಳ್ಳಬೇಕಾಗಿತ್ತು ಎಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ, ವರದಿಯಲ್ಲಿರುವಂತೆ ಆರೋಪಿತರು ಆಗಾಗ್ಗೆ ವಿಚಾರಣೆಗೆ ಹಾಜರಾಗಿಲ್ಲ. ಪರಿಣಾಮಕಾರಿಯಾಗಿ ಹೇಳಿಕೆಯನ್ನೂ ಕೊಟ್ಟಿಲ್ಲ. ಅವರ ತಂದೆಯವರು ದೂರನ್ನು ವಾಪಾಸ್ಸು ಪಡೆದಿದ್ದಾರೆ. ಆದುದರಿಂದ, ವರದಿಯ ಪ್ರಕಾರ ಕ್ರಮ ಕೈಗೊಳ್ಳಲು ಆಗುವುದಿಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ದೂರುದಾರರು ಎಲ್ಲಾ ಸಭೆಗಳಿಗೆ ಹಾಜರಾಗಿ ತಮ್ಮ ಅಪಾದನೆಯನ್ನು ಪ್ರತಿಪಾದಿಸಿದ್ದಲ್ಲಿ ವಿಶ್ವವಿದ್ಯಾಲಯವು ಕ್ರಮ ಕೈಗೊಳ್ಳುತ್ತಿತ್ತು. ಆರೋಪಗಳು ಸಾಬೀತಾಗದಿದ್ದಲ್ಲಿ ನಾವು ಕ್ರಮ ಕೈಗೊಳ್ಳಲು ಕಾನೂನಿನ ಅಡಿಯಲ್ಲಿ ಅವಕಾಶ ಇಲ್ಲ ಎಂದರು.

**ನಿರ್ಣಯ:** ಚರ್ಚೆಯ ನಂತರ, ಡಾ.ಮಾಲಾ ಹೆಚ್.ಜಿ. ಮತ್ತು ಪ್ರೊ. ಎಸ್.ಎನ್.ಯೋಗೀಶ್‌ರವರ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯವು ರಚಿಸಿದ್ದ Internal Compliance Committee ಯು ದಿನಾಂಕ: 02–12–2025ರಂದು ಸಲ್ಲಿಸಿದ್ದ ಅಂತಿಮ ವರದಿಯನ್ನು ಪರಿಶೀಲಿಸಿ ಅನುಮೋದಿಸಲು ನಿರ್ಣಯಿಸಿದ ಸಭೆಯು, ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲು ಅನುಮೋದನೆ ನೀಡಿತು.

**2026–ಸಿಂ–1.19:** ಸ್ನಾತಕೋತ್ತರ ವಿಭಾಗ ಮತ್ತು ಘಟಕ ಕಾಲೇಜುಗಳ ಅಧ್ಯಾಪಕರುಗಳಿಗೆ ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ ಹಾಗೂ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ ನೀಡಿ ಹೊರಡಿಸಿರುವ ಆದೇಶವನ್ನು ಸ್ಥಿರೀಕರಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ದಿನಾಂಕ:01–01–2016ರಿಂದ ಜಾರಿಗೆ ಬಂದಿರುವ 7ನೇ ಯು.ಜಿ.ಸಿ. ಪರಿಷ್ಕೃತ ವೇತನ ಶ್ರೇಣಿ ವಿಸ್ತರಣೆ ಕುರಿತಂತೆ ಸರ್ಕಾರದ ಆದೇಶ ಹಾಗೂ ಯು.ಜಿ.ಸಿ. ಪತ್ರದನ್ವಯ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ಮೂಲಕ ವೃತ್ತಿ ಪದೋನ್ನತಿ ನೀಡಲು ಅವಕಾಶವಿರುತ್ತದೆ. ಈ ಸಂಬಂಧ ನೇಮಕಾತಿ ಮಂಡಳಿಯ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಶಿಫಾರಸ್ಸಿನಂತೆ ಅರ್ಹ ಸಹಾಯಕ ಪ್ರಾಧ್ಯಾಪಕರಿಗೆ ಸಹ ಪ್ರಾಧ್ಯಾಪಕರಾಗಿ ಹಾಗೂ ಸಹ ಪ್ರಾಧ್ಯಾಪಕರಿಗೆ ಪ್ರಾಧ್ಯಾಪಕರಾಗಿ ವೃತ್ತಿ ಪದೋನ್ನತಿ ಯೋಜನೆಯಡಿ ಸ್ಥಾನೀಕರಣ ನೀಡಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ ಸಹ ಪ್ರಾಧ್ಯಾಪಕ ಮತ್ತು ಪ್ರಾಧ್ಯಾಪಕ ಹುದ್ದೆಗೆ ಅರ್ಜಿದಾರರುಗಳು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಿ, ಅವರೊಂದಿಗೆ ಮೌಖಿಕ ಚರ್ಚೆ ನಡೆಸಿ, ಅವರ ಅರ್ಹತಾ ಸೇವೆ ಹಾಗೂ ತೃಪ್ತಿಕರವಾದ ಸ್ವಯಂ ಮೌಲ್ಯಮಾಪನ ವರದಿ, ಪರಿಣಿತರ ಮೌಲ್ಯಮಾಪನ ವರದಿ, ಅವರು ಪ್ರಕಟಿಸಿರುವ ಪುಸ್ತಕ/ ಸಂಶೋಧನಾ ಪತ್ರಿಕೆಗಳನ್ನು IQAC ಯಿಂದ ಪರಿಶೀಲನೆಗೊಳಪಡಿಸಿ, ಅವುಗಳ ಒಟ್ಟು ಮೌಲ್ಯಮಾಪನದ ಆಧಾರದ ಮೇರೆಗೆ ಅಧ್ಯಾಪಕರಿಗೆ ಯುಜಿಸಿ ನಿಯಮಗಳನುಸಾರ ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ ಸಹ ಪ್ರಾಧ್ಯಾಪಕ ಮತ್ತು ಪ್ರಾಧ್ಯಾಪಕ ಹುದ್ದೆಗೆ ಸ್ಥಾನೀಕರಿಸಲು "Whether the University as per 40(1) of KSU Act has got the statutes approved to adopt the UGC gazette notification. The University has given response to the letter from Principal Secretary, Department of Higher Education, Govt. of Karnataka and waiting for their response. Hence, it is herewith resolved that on receiving the approval from the Govt. of Karnataka for implementing the gazette notification of UGC, 2018 approval of Academic Council and Syndicate to the promotions of the applicants claiming benefits under the aforesaid gazette notification would be effected. Following this, a resprocessing of the following applications will be initiated" ಎಂದು ಸ್ನಾತಕ ಮತ್ತು ಸ್ನಾತಕೋತ್ತರ ವಿಷಯದ ನೇಮಕಾತಿ ಮಂಡಳಿಗಳು (BoA) ಶಿಫಾರಸ್ಸು ಮಾಡಿರುತ್ತದೆ.

ಅದರಂತೆ, ನೇಮಕಾತಿ ಮಂಡಳಿಯ (BoA) ಶಿಫಾರಸ್ಸುಗಳನ್ನು ದಿನಾಂಕ:07–03–2025 ರಂದು ಜರುಗಿದ ಸಿಂಡಿಕೇಟ್ ಸಭೆಯ ಅವಗಾಹನೆಗೆ ಸಲ್ಲಿಸಲಾಗಿತ್ತು. ಸದರಿ ಸಿಂಡಿಕೇಟ್ ಸಭೆಯು ನೇಮಕಾತಿ ಮಂಡಳಿಯ (BoA) ಶಿಫಾರಸ್ಸುಗಳನ್ನು ಅಂಗೀಕರಿಸಿ, ಘಟಕ ಕಾಲೇಜುಗಳ 05 ಅಧ್ಯಾಪಕರುಗಳಿಗೆ ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ ಹಾಗೂ ಸ್ನಾತಕೋತ್ತರ ವಿಭಾಗದ ಒಬ್ಬ ಅಧ್ಯಾಪಕರಿಗೆ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ ನೀಡಿ ಸ್ಥಾನೀಕರಿಸಲು ಅನುಮೋದನೆ ನೀಡಿರುತ್ತದೆ. ಆದರೆ, ದಿನಾಂಕ: 17–01–2024ರಲ್ಲಿ ಸರ್ಕಾರದಿಂದ, ಯು.ಜಿ.ಸಿ 2016ರ 7ನೇ ಪರಿಷ್ಕೃತ ವೇತನ ಶ್ರೇಣಿಯನ್ನು ವಿಸ್ತರಿಸುವ ಕುರಿತು ರಚಿಸಲಾದ ಪರಿನಿಯಮವು ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡಿದ್ದು, ಸದರಿ ಪರಿನಿಯಮದ ಪ್ಯಾರ 28.2ರಲ್ಲಿ "Any amendments/ Modifications issued/Notifiied by the UGC/MHRD, and State Government Orders issued from time to time relating to the provisions of these Statues, shall be deemed to have been incorporated into the relevant clauses of these Statues" ಎಂಬುದಾಗಿರುತ್ತದೆ. ಆದ್ದರಿಂದ, ಯುಜಿಸಿ ನೋಟಿಫಿಕೇಷನ್ ಹಾಗೂ ಅನುಮೋದನೆಗೊಂಡ ಪರಿನಿಯಮದನ್ವಯ ಈ ಕೆಳಕಂಡ ಅಧ್ಯಾಪಕರುಗಳಿಗೆ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಹಾಗೂ ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವೃತ್ತಿ ಪದೋನ್ನತಿ ನೀಡಿ ಆದೇಶ ಹೊರಡಿಸಲಾಗಿದ್ದು ಇದನ್ನು ಅನುಮೋದನೆಗಾಗಿ ಮಂಡಿಸಿದೆ ಎಂದರು.

| ಕ್ರ ಸಂ. | ಅಧ್ಯಾಪಕರ ಹೆಸರು ಮತ್ತು ವಿಭಾಗ ಡಾ./ಶ್ರೀ/ಶ್ರೀಮತಿ | ಪ್ರಸ್ತುತ ಹುದ್ದೆ | ಪದೋನ್ನತಿ ನೀಡಲಾಗುತ್ತಿರುವ ಹುದ್ದೆ | ಸ್ಥಾನೀಕರಣದ ದಿನಾಂಕ |
|---|---|---|---|---|
| 1) | ಡಾ ಯೋಗೀಶ್ ನಾಯ್ಕ್, ಜಿ. ಆರ್., ಸ್ನಾತಕೋತ್ತರ ಎಂ.ಸಿ.ಎ/ ಗಣಕ ವಿಜ್ಞಾನ ಅಧ್ಯಯನ ಮತ್ತು ಸಂಶೋಧನ ವಿಭಾಗ | Associate Professor | Professor | 01–05–2020 |
| 2) | ಷಫಿವುಲ್ಲಾ, ಕೆ., ಇತಿಹಾಸ ವಿಭಾಗ ಸಹ್ಯಾದ್ರಿ ಕಲಾ ಕಾಲೇಜು | Assistant Professor | Associate Professor | 16–03–2024 |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

| | | | | |
|---|---|---|---|---|
| 3) | ರಂಗರಾಜು, ಕೆ.,<br>ರಾಜ್ಯಶಾಸ್ತ್ರ ವಿಭಾಗ<br>ಸಹ್ಯಾದ್ರಿ ಕಲಾ ಕಾಲೇಜು | Assistant Professor | Associate Professor | 08-03-2024 |
| 4) | ಮೋಹನೇಶ್. ಕೆ.ಎಂ.,<br>ಎಲೆಕ್ಟ್ರಾನಿಕ್ಸ್ ವಿಭಾಗ<br>ಸಹ್ಯಾದ್ರಿ ವಿಜ್ಞಾನ ಕಾಲೇಜು | Assistant Professor | Associate Professor | 29-01-2020 |
| 5) | ಸಾಯಿಶ್ವರ, ಹೆಚ್.ಎ.,<br>ಪ್ರಾಣಿಶಾಸ್ತ್ರ ವಿಭಾಗ<br>ಸಹ್ಯಾದ್ರಿ ವಿಜ್ಞಾನ ಕಾಲೇಜು | Assistant Professor | Associate Professor | 30-07-2024 |
| 6) | ಶಾಂತ. ಎ.ಆರ್.,<br>ಪ್ರಾಣಿಶಾಸ್ತ್ರ ವಿಭಾಗ<br>ಸಹ್ಯಾದ್ರಿ ವಿಜ್ಞಾನ ಕಾಲೇಜು | Assistant Professor | Associate Professor | 01-07-2020 |

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯ ಹಾಗೂ ಘಟಕ ಕಾಲೇಜುಗಳ ಅಧ್ಯಾಪಕರಿಗೆ ಯುಜಿಸಿ ನೋಟಿಫಿಕೇಷನ್ ಹಾಗೂ ಅನುಮೋದನೆಗೊಂಡ ಪರಿನಿಯಮದನ್ವಯ ಸ್ನಾತಕೋತ್ತರ ವಿಭಾಗದ ಒಬ್ಬ ಅಧ್ಯಾಪಕರಿಗೆ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಹಾಗೂ ಘಟಕ ಕಾಲೇಜುಗಳ ಐವರಿಗೆ ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವೃತ್ತಿ ಪದೋನ್ನತಿ ನೀಡಿ ಆದೇಶ ಹೊರಡಿಸಲಾಗಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿತು.

**2026–ಸಿಂ–1.20:** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸುವ ಕುರಿತು.

**ಚರ್ಚೆ:** ಎರಡು ವರ್ಷಗಳ ಅವಧಿ ಮುಗಿದ ಹಾಗೂ ವಯೋನಿವೃತ್ತಿಯಿಂದ ತೆರವಾಗುತ್ತಿರುವ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸುವ ಸಲುವಾಗಿ ಸಂಬಂಧಪಟ್ಟ ವಿಭಾಗಗಳ ಪ್ರಾಧ್ಯಾಪಕರ ಪಟ್ಟಿಯನ್ನು ಕುಲಸಚಿವರು ಸಭೆಗೆ ಮಂಡಿಸಿದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಈ ಕೆಳಕಂಡ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿಭಾಗಾಧ್ಯಕ್ಷರ ಅವಧಿಯು ಮುಕ್ತಾಯಗೊಳ್ಳಲಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7)ರನ್ವಯ ನೂತನ ವಿಭಾಗಾಧ್ಯಕ್ಷರ ನೇಮಕ ಮಾಡಲು ಸರ್ವಾನುಮತದಿಂದ ಅನುಮೋದಿಸಲಾಯಿತು.

| ಕ್ರ ಸಂ. | ಹೆಸರು ಮತ್ತು ಹುದ್ದೆ | ವಿಭಾಗ | ಅಧ್ಯಕ್ಷರಾಗಿ ನೇಮಕ ಮಾಡಬೇಕಾದ ದಿನಾಂಕ |
|---|---|---|---|
| 01 | ಡಾ.ಆರ್. ಹಿರೇಮಣಿ ನಾಯ್ಕ<br>ಹಿರಿಯ ಪ್ರಾಧ್ಯಾಪಕರು | ಎಂ.ಬಿ.ಎ. | 23-01-2026 |
| 02 | ಡಾ.ಸುರೇಶ್ ಎಂ.<br>ಸಹ ಪ್ರಾಧ್ಯಾಪಕರು | ಎಂ.ಸಿ.ಎ. ಮತ್ತು ಕಂಪ್ಯೂಟರ್ ಸೈನ್ಸ್ | 23-01-2026 |
| 03 | ಡಾ.ಸಂತೋಷ್‌ಕುಮಾರ್ ಕೆ.ಟಿ.<br>ಪ್ರಾಧ್ಯಾಪಕರು | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | 01-06-2026 |
| 04 | ಡಾ.ಗೀತಾ ಸಿ.<br>ಪ್ರಾಧ್ಯಾಪಕರು | ಶಿಕ್ಷಣಶಾಸ್ತ್ರ | 01-07-2026 |

**2026–ಸಿಂ–1.21:** ಶ್ರೀ ಶಿವಕುಮಾರ್ ಹಂಪಾಳಿ, ನಿವೃತ್ತ ಕಾರ್ಯಪಾಲಕ ಅಭಿಯಂತರರು, ಶಿವಮೊಗ್ಗ – ಇವರನ್ನು ತಾತ್ಕಾಲಿಕವಾಗಿ Solar Energy & Related Infrastructure Consultant ಆಗಿ ನೇಮಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಚರ್ಚೆ: ಕುಲಸಚಿವರು ಮಾತನಾಡಿ, ಶ್ರೀ ಶಿವಕುಮಾರ್ ಹಂಪಾಳಿ, ನಿವೃತ್ತ ಕಾರ್ಯಪಾಲಕ ಅಭಿಯಂತರರು, ಶಿವಮೊಗ್ಗ – ಇವರನ್ನು ವಿಶ್ವವಿದ್ಯಾಲಯದ ನ್ಯಾಕ್ ಕಾರ್ಯ ಪೂರ್ಣಗೊಳ್ಳುವವರೆಗೆ ಅಥವಾ ಒಂದು ವರ್ಷದ ಅವಧಿಗೆ NAAC and Infrastructure Consultant ಆಗಿ ನೇಮಕ ಮಾಡಲಾಗಿದ್ದು, ನ್ಯಾಕ್ ಕಾರ್ಯ ಮುಕ್ತಾಯಗೊಂಡಿರುವುದರಿಂದ ಅವರನ್ನು ದಿನಾಂಕ:16-06-2025 ರಿಂದ ಪೂರ್ವಾನ್ವಯವಾಗುವಂತೆ ಸದರಿ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ. ಪ್ರಸ್ತುತ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಸೌರ ಶಕ್ತಿ ಯೋಜನೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಬೇಕಾಗಿದ್ದು, ಈ ಯೋಜನೆಯ ಕುರಿತು ಅಪಾರ ಅನುಭವ ಹೊಂದಿರುವ ಶ್ರೀ ಶಿವಕುಮಾರ್ ಹಂಪಾಳಿರವರನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಸೌರ ಶಕ್ತಿ ಯೋಜನೆಯನ್ನು ಕಾರ್ಯಗತಗೊಳಿಸುವ ಸಂಬಂಧ ಆದೇಶದ ದಿನಾಂಕದಿಂದ 6 ತಿಂಗಳ ಅವಧಿಗೆ ಅಥವಾ ಸದರಿ ಕಾರ್ಯ ಪೂರ್ಣಗೊಳ್ಳುವವರೆಗೆ ತಾತ್ಕಾಲಿಕವಾಗಿ Solar Energy & Related Infrastructure Consultant ಆಗಿ ಮಾಸಿಕ ರೂ.75,000/- (ರೂಪಾಯಿ ಎಪ್ಪತ್ತೈದು ಸಾವಿರ ಮಾತ್ರ) ಗಳ ಕ್ರೋಢೀಕೃತ ಸಂಭಾವನೆಯೊಂದಿಗೆ ಸದರಿಯವರ ಸೇವೆ ಬಳಸಿಕೊಳ್ಳಲು ಮಂಜೂರಾತಿ ನೀಡಿ ಹೊರಡಿಸಲಾದ ಕ್ರಮವನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು.

ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ, ನಿವೃತ್ತರನ್ನು ಮರುನೇಮಕ ಮಾಡಿಕೊಳ್ಳಲು ಸರ್ಕಾರದ ನಿಯಮಗಳಲ್ಲಿ ಅವಕಾಶವಿಲ್ಲ. ನಿವೃತ್ತರನ್ನು ತೆಗೆದುಕೊಳ್ಳುವುದಾದಲ್ಲಿ ಸರ್ಕಾರದ ಅನುಮೋದನೆ ಪಡೆದುಕೊಳ್ಳಬೇಕು. ಸರ್ಕಾರದ ಅನುಮೋದನೆ ಆಗಿದ್ದಲ್ಲಿ ಅವರ ನೇಮಕಾತಿಯನ್ನು ಸ್ಥಿರೀಕರಿಸಬಹುದು. ಇಲ್ಲವಾದಲ್ಲಿ ಸರ್ಕಾರದಲ್ಲಿಯೇ ಸೋಲಾರ್ ಪ್ರಾಜೆಕ್ಟ್‌ನಲ್ಲಿ ಅಪಾರ ಅನುಭವ ಹೊಂದಿರುವ ಇಂಜಿನಿಯರ್‌ಗಳು ಇರುತ್ತಾರೆ. ಅವರನ್ನು ನಿಯೋಜಿಸುವಂತೆ ಪತ್ರ ಬರೆಯಿರಿ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಶ್ರೀ ಶಿವಕುಮಾರ್ ಹಂಪಾಳಿರವರು ಸೋಲಾರ್ ಪ್ರಾಜೆಕ್ಟ್ ಬಗ್ಗೆ ಉತ್ತಮವಾದ ಪ್ರಸ್ತಾವನೆ ನೀಡಿದ್ದಾರೆ. ವಿಶ್ವವಿದ್ಯಾಲಯಕ್ಕೆ ಸೋಲಾರ್ ಪ್ರಾಜೆಕ್ಟ್‌ಗಾಗಿ ಅವರನ್ನು ಮೇಲ್ವಿಚಾರಣೆಗಾಗಿ ತೆಗೆದುಕೊಳ್ಳಲಾಗಿದೆ. ವಿಶ್ವವಿದ್ಯಾಲಯದ ಒಳಿತಿನ ದೃಷ್ಟಿಯಿಂದ ಅವರು Solar installation ಆಗುವವರೆಗೆ ಇರುತ್ತಾರೆ ಎಂದರು.

ಶ್ರೀ ಶಾಂತಕುಮಾರ್‌ರವರು ಮಾತನಾಡಿ, ನ್ಯಾಕ್ ಸಮಯದಲ್ಲಿ ಕೇಳಿದಾಗ ಅಗತ್ಯತೆ ಪರಿಗಣಿಸಿ ಅನುಮತಿ ನೀಡಲಾಗಿತ್ತು. ಸೋಲಾರ್ ಪ್ರಾಜೆಕ್ಟ್‌ನ್ನು ಕ್ರೆಡೆಲ್‌ನಲ್ಲಿರುವ ಇಂಜಿನಿಯರ್‌ಗಳೇ ನಿರ್ವಹಿಸುತ್ತಾರೆ ಎಂದರು.

ಕುಲಸಚಿವರು ಮಾತನಾಡಿ, ಅವರನ್ನು ಕೇವಲ 5-6 ತಿಂಗಳುಗಳ ಅವಧಿಗೆ ಮಾತ್ರ ತೆಗೆದುಕೊಳ್ಳಲಾಗುತ್ತಿದೆ ಎಂದರು. ಮಾನ್ಯ ಕುಲಪತಿಯವರು ಮುಂದುವರೆದು ಮಾತನಾಡಿ, ನ್ಯಾಕ್ ಅವಧಿಯಲ್ಲಿ ಕೈಗೊಂಡ ಕೆಲವು ಕೆಲಸಗಳು ಬಾಕಿ ಉಳಿದಿವೆ. ಕೆಲವು ಕಟ್ಟಡಗಳು ಸೋರುತ್ತಿದ್ದು, ಸೋರಿಕೆ ತಡೆಯಲು ಶಾಶ್ವತ ಪರಿಹಾರ ಮಾಡಿಕೊಡುವುದಾಗಿ ತಿಳಿಸಿದ್ದಾರೆ ಎಂದರು.

ಡಾ. ಎಂ. ವೆಂಕಟೇಶ್‌ರವರು ಮಾತನಾಡಿ, ಡಿ.ವಿ.ಎಸ್. ಶಿಕ್ಷಣ ಸಂಸ್ಥೆಯಲ್ಲಿ ಸೋರುತ್ತಿದ್ದ ಕಟ್ಟಡಗಳ ದುರಸ್ತಿಗೆ ಬಹಳಷ್ಟು ಪ್ರಯತ್ನ ಪಟ್ಟೆವು. ಆದರೆ, ಶ್ರೀ ಶಿವಕುಮಾರ್ ಹಂಪಾಳಿಯವರು ಅದಕ್ಕೆ ಶಾಶ್ವತ ಪರಿಹಾರ ನೀಡಿದ್ದು, ಅವರು ತಜ್ಞರಿದ್ದಾರೆ ಎಂದರು.

ಪ್ರೊ. ಸಾಕಮ್ಮ ಬಿ.ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿಯೇ ಮೂವರು ಇಂಜಿನಿಯರ್‌ಗಳಿದ್ದು, ಅವರಿಂದಲೇ ಈ ಕೆಲಸಗಳನ್ನು ಮಾಡಿಸಿ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ನಮ್ಮ ಇಂಜಿನಿಯರ್‌ಗಳು ಸಮರ್ಪಕವಾಗಿ ಕೆಲಸ ನಿರ್ವಹಿಸಿದ್ದರೆ ಅವರ ಅಗತ್ಯ ಇರುತ್ತಿರಲಿಲ್ಲ. ವಿಶ್ವವಿದ್ಯಾಲಯದ ಒಳಿತಿನ ದೃಷ್ಟಿಯಿಂದ ಶ್ರೀ ಶಿವಕುಮಾರ್ ಹಂಪಾಳಿರವರ ಸೇವೆ ಪಡೆಯುವ ಅಗತ್ಯವಿದೆ ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ವಿಶ್ವವಿದ್ಯಾಲಯದ ಇಂಜಿನಿಯರ್‌ಗಳು ಸರಿಯಾಗಿ ಕೆಲಸ ನಿರ್ವಹಿಸದಿದ್ದಲ್ಲಿ ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು. ವಿಶ್ವವಿದ್ಯಾಲಯದ ವಿವಿಧ ಕಟ್ಟಡಗಳಲ್ಲಿ ಗಿಡಗಂಟಿಗಳು ಬೆಳೆದಿದ್ದು, ಈವರೆಗೂ ತೆರವುಗೊಳಿಸಿಲ್ಲ. ಇದರಿಂದ ಕಟ್ಟಡಗಳು ಹಾಳಾಗುತ್ತಿದ್ದು, ಅವುಗಳ ಆಯಸ್ಸು ಕೂಡ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ನಿಗದಿಗಿಂತ ಕಡಿಮೆಯಾಗುತ್ತದೆ. ಪ್ರಸ್ತುತ ಇಂಜಿನಿಯರ್‌ಗಳು ವಿಶ್ವವಿದ್ಯಾಲಯದ ಆವರಣದಲ್ಲಿ ಯಾವುದೇ ಹೊಸ ಕಟ್ಟಡಗಳನ್ನು ನಿರ್ಮಿಸುತ್ತಿಲ್ಲ. ಅಲ್ಲದೇ ಇರುವ ಕಟ್ಟಡಗಳನ್ನು ಕೂಡ ನಿರ್ವಹಣೆ ಮಾಡುತ್ತಿಲ್ಲವಾದರೆ ಅವರ ಅವಶ್ಯಕತೆ ಏನು? ಎಂದರು. ಎಲ್ಲಾ ಸದಸ್ಯರು ಈ ಕುರಿತು ಕ್ರಮ ಕೈಗೊಳ್ಳಬೇಕೆಂದರು. ಕುಲಸಚಿವರು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಶ್ರೀ ಶಿವಕುಮಾರ್ ಹಂಪಾಳಿಯವರನ್ನು ತೆಗೆದುಕೊಳ್ಳಲು ಒಪ್ಪಿಗೆ ಇಲ್ಲದವರು ಡೀಸೆಂಟ್ ನೋಟ್ ನೀಡಬಹುದು ಎಂದರು.

**ನಿರ್ಣಯ:** ಸಭೆಯಲ್ಲಿ ಒಮ್ಮತದ ಅಭಿಪ್ರಾಯ ಬಾರದ ಹಿನ್ನೆಲೆಯಲ್ಲಿ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳು, ವಿಶ್ವವಿದ್ಯಾಲಯದ ವಿದ್ಯುತ್ ವೆಚ್ಚದಲ್ಲಿ ಮಿತವ್ಯಯ ಸಾಧಿಸಲು ಸೌರವಿದ್ಯುದೀಕರಣ ಪ್ರಕ್ರಿಯೆ ಕೈಗೊಳ್ಳುವ ಸಲುವಾಗಿ ಅದರ ಮೇಲುಸ್ತುವಾರಿಗಾಗಿ ನಿವೃತ್ತ ಕಾರ್ಯಪಾಲಕ ಅಭಿಯಂತರರಾದ ಶ್ರೀ ಶಿವಕುಮಾರ್ ಹಂಪಾಳಿ ಇವರ ತಾತ್ಕಾಲಿಕ ನೇಮಕಾತಿಗೆ ಅನುಮೋದನೆ ಕೋರಿದರು. ಸದರಿಯವರ ನೇಮಕಾತಿ ಕ್ರಮವು ಸರ್ಕಾರದ ನಿಯಮಕ್ಕೆ ವಿರುದ್ಧವಾಗಿರುವುದೆಂಬ ಕಾರಣಕ್ಕೆ 08 ಮಂದಿ ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಮಾತ್ರ ತಮ್ಮ ಅಸಮ್ಮತಿಯನ್ನು ಲಿಖಿತವಾಗಿ ಸೂಚಿಸಿದ್ದರಿಂದ, ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಕುಲಪತಿಗಳು ಕೈಗೊಂಡ ತಾತ್ಕಾಲಿಕ ನೇಮಕಾತಿ ಕ್ರಮವನ್ನು ಅನುಮೋದಿಸಲಾಯಿತು.

**2026–ಸಿಂ–1.22:** ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನರ್ಸ್, ಫಾರ್ಮಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್ ಇವರುಗಳಿಗೆ ಪರಿಷ್ಕೃತ ವೇತನವನ್ನು ಪಾವತಿಸುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಏಜೆನ್ಸಿ ಮೂಲಕ ಕಾರ್ಯನಿರ್ವಹಿಸುತ್ತಿರುವ ನರ್ಸ್, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್ ಇವರುಗಳು ಸುಮಾರು 20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಾ ಬಂದಿರುತ್ತಾರೆ. ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ಇತರೆ ವಿಶ್ವವಿದ್ಯಾಲಯಗಳಲ್ಲಿ ಸದರಿ ಹುದ್ದೆಯ ಖಾಯಂ ನೌಕರರಿದ್ದಾರೆ. ಆದ್ದರಿಂದ, ಇವರುಗಳು ಇತರೆ ವಿಶ್ವವಿದ್ಯಾಲಯಗಳಂತೆ ಸಂಚಿತ ವೇತನ, ಗೌರವ ಸಂಭಾವನೆಯಲ್ಲಿ ನೇಮಕ ಮಾಡುವಂತೆ ಅಥವಾ ಖಾಯಂ ಮಾಡುವಂತೆ ಕೋರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಕುವೆಂಪು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಹುದ್ದೆಗಳನ್ನು ಸೃಜಿಸುವ ಸಂಬಂಧ ರಚಿಸಲಾದ ಪರಿನಿಯಮವನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ದಿನಾಂಕ:27–03–2025ರ ಸರ್ಕಾರದ ಪತ್ರದಲ್ಲಿ ಸದರಿ ಪರಿನಿಯಮವನ್ನು ಒಪ್ಪಲು ಸಾಧ್ಯವಿಲ್ಲವೆಂದು ಹಿಂದಿರುಗಿಸಿದೆ. ಈ ಹಿನ್ನೆಲೆಯಲ್ಲಿ, ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನರ್ಸ್, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್ ಇವರುಗಳು ಪ್ರಸ್ತುತ ಪಡೆಯುತ್ತಿರುವ ವೇತನಕ್ಕೆ ರೂ. 5000/–ಗಳನ್ನು ಹೆಚ್ಚಿಸಿ ಡಿಸೆಂಬರ್–2025ರ ಮಾಹೆಯಿಂದ ಅನ್ವಯವಾಗುವಂತೆ ಪರಿಷ್ಕೃತ ಹೆಚ್ಚುವರಿ ಹಣವನ್ನು ಮಂಜೂರು ಮಾಡಿ ಹೊರಡಿಸಲಾಗಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ ಎಂದರು.

ಪ್ರೊ. ಸಾಕಮ್ಮ ಬಿ. ರವರು ಮಾತನಾಡಿ, ಆರೋಗ್ಯ ಕೇಂದ್ರದವರಿಗೆ ಮಾತ್ರ ನೀಡಿದರೆ ಉಳಿದವರಿಗೆ ಅನ್ಯಾಯವಾಗುವುದಿಲ್ಲವೇ? ಹಾಸ್ಟೆಲ್‌ನಲ್ಲಿ ಬಹಳ ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವವರಿಗೆ ಪಿ.ಎಫ್., ಇ.ಎಸ್.ಐ., ಮುಂತಾದ ಸೌಲಭ್ಯಗಳು ಕೂಡ ಇಲ್ಲ ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ಅತಿಥಿಗೃಹದ ಸಿಬ್ಬಂದಿ ಹಗಲು ರಾತ್ರಿ ಕೆಲಸ ನಿರ್ವಹಿಸುತ್ತಾರೆ. ಅವರಿಗೂ ನೀಡಿ ಎಂದರು. ಕುಲಸಚಿವರು ಮಾತನಾಡಿ, ಅತಿಥಿಗೃಹದಲ್ಲಿ ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಬೇರೆ ಬೇರೆ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಆರೋಗ್ಯ ಕೇಂದ್ರದ ನೌಕರರ ಸೇವೆ ವಿಭಿನ್ನವಾದುದು. ಅವರ ಕೌಶಲ್ಯಕ್ಕೆ ಹಾಗೂ ಸೇವೆಗೆ ಬೇರೆ ಆಸ್ಪತ್ರೆಗಳಲ್ಲಿ ಹೆಚ್ಚಿನ ವೇತನ ಪಡೆಯುತ್ತಿದ್ದಾರೆ. ಹಾಸನದ ವೈದ್ಯಕೀಯ ಕಾಲೇಜಿನಲ್ಲಿ ನೀಡುತ್ತಿರುವಂತೆ ಮಾಸಿಕ ರೂ.30,000/–ಗಳ ವೇತನ ನೀಡಿ ಎಂದರು. ಎಲ್ಲಾ ಸದಸ್ಯರು ರೂ.30,000/–ಗಳಿಗೆ ಹೆಚ್ಚಿಸಿ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

**ನಿರ್ಣಯ:** ಚರ್ಚೆಯ ನಂತರ, ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನರ್ಸ್, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್ ಇವರುಗಳಿಗೆ ಹಾಸನದ ವೈದ್ಯಕೀಯ ಕಾಲೇಜಿನಲ್ಲಿ ನೀಡುತ್ತಿರುವಂತೆ ಮಾಸಿಕ ರೂ.30,000/-ಗಳ ವೇತನವನ್ನು ನೀಡಲು ಹೊರಗುತ್ತಿಗೆ ಏಜನ್ಸಿಯವರಿಗೆ ಆದೇಶ ನೀಡಬೇಕೆಂದು ನಿರ್ಣಯಿಸಲಾಯಿತು.

**2026–ಸಿಂ–1.22(ಎ):** ಕುವೆಂಪು ವಿಶ್ವವಿದ್ಯಾಲಯ ಕಲ್ಯಾಣ ಕರ್ನಾಟಕ (ಹೈದ್ರಾಬಾದ್) 371(ಜೆ) ನೌಕರರ ಸಂಘ ಸ್ಥಾಪಿಸಲು ಅನುಮತಿ ನೀಡುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದಲ್ಲಿ 371(ಜೆ) ವೃಂದಕ್ಕೆ ಮೀಸಲಿರಿಸಿದ ವಿವಿಧ ವೃಂದದ ಹುದ್ದೆಗಳಿಗೆ ನೇಮಕವಾದ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರುಗಳು ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ಕುವೆಂಪು ವಿಶ್ವವಿದ್ಯಾಲಯದ ಕಲ್ಯಾಣ ಕರ್ನಾಟಕ 371(ಜೆ) ನೌಕರರ ಸಂಘವನ್ನು ಸ್ಥಾಪಿಸಲು ಅನುಮತಿ ನೀಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

**2026–ಸಿಂ–1.22(ಬಿ):** ಡಾ. ಲತಾ ಕೆ.ಪಿ. ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇವರನ್ನು ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಹುದ್ದೆಗೆ ನಿಯೋಜಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಡಾ. ಲತಾ, ಕೆ.ಪಿ., ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇವರನ್ನು ಕರ್ನಾಟಕ ಸರ್ಕಾರವು ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ನೇಮಕ ಮಾಡಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅನುಕೂಲವಾಗುವಂತೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸರ್ಕಾರದ ಅಧಿಸೂಚನೆಯಲ್ಲಿರುವ ಷರತ್ತಿಗೊಳಪಟ್ಟು ಕಾಲೇಜಿನ ಕರ್ತವ್ಯದಿಂದ ಬಿಡುಗಡೆಗೊಳಿಸಲಾದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

**2026–ಸಿಂ–1.22(ಸಿ):** ಡಾ. ಮೋಹನ್ ಹೆಚ್.ಎಸ್. ಕನ್ನಡ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ – ಇವರನ್ನು ತುಮಕೂರು ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಹುದ್ದೆಗೆ ನಿಯೋಜಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜಿನ ಕನ್ನಡ ವಿಷಯದ ಪ್ರಾಧ್ಯಾಪಕರಾದ ಡಾ. ಮೋಹನ್ ಹೆಚ್ ಎಸ್. ಇವರನ್ನು ಸರ್ಕಾರವು ತುಮಕೂರು ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಹುದ್ದೆಗೆ ನೇಮಿಸಿರುವ ಹಿನ್ನೆಲೆಯಲ್ಲಿ, ಅವರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅನುಕೂಲವಾಗುವಂತೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸರ್ಕಾರದ ಅಧಿಸೂಚನೆಯಲ್ಲಿರುವ ಷರತ್ತಿಗೊಳಪಟ್ಟು ಕಾಲೇಜಿನ ಕರ್ತವ್ಯದಿಂದ ಬಿಡುಗಡೆಗೊಳಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

**2026–ಸಿಂ–1.22(ಡಿ):** ಡಾ. ಜಗನ್ನಾಥ ಕೆ ಡಾಂಗೆ, ಪ್ರಾಧ್ಯಾಪಕರು – ಇವರಿಗೆ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡುವ ಬಗ್ಗೆ.

**ಚರ್ಚೆ:** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರೊ.ಜಗನ್ನಾಥ ಕೆ ಡಾಂಗೆ, ಇವರು "Experiments in Education: Theories and Models" ಎಂಬ ವಿಷಯದ ಕುರಿತು ಮಾಹಿತಿ ಸಂಗ್ರಹಿಸಿ ಗ್ರಂಥವನ್ನು ಹೊರತರಲು ಉದ್ದೇಶಿಸಿರುವುದರಿಂದ ದಿನಾಂಕ:01-04-2026 ರಿಂದ 31–03–2027ರವರೆಗೆ ಒಂದು ವರ್ಷದ ಅವಧಿಗೆ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ವಿಶ್ವವಿದ್ಯಾಲಯದ ಸಬ್ಬಾಟಿಕಲ್ ರಜೆಯ ಪರಿನಿಯಮ ಹಾಗೂ ಮಾರ್ಗಸೂಚಿಯ ಪ್ರಕಾರ ಅವರು ಸಬ್ಬಾಟಿಕಲ್ ರಜೆಗೆ ಅರ್ಹರಿರುತ್ತಾರೆ. ಈ ಹಿನ್ನೆಯಲ್ಲಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಅವರು ಪ್ರಸ್ತುತ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ದೂರ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅಲ್ಲಿ ಕೆಲವು ಕೆಲಸಗಳು ಬಾಕಿ ಇವೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಬಾಕಿ ಇರುವ ಕೆಲಸಗಳನ್ನು ಮುಗಿಸುವ ಷರತ್ತು ವಿಧಿಸಿ ಮಂಜೂರು ಮಾಡಬಹುದು ಎಂದರು.

ನಿರ್ಣಯ: ಚರ್ಚೆಯ ನಂತರ, ಡಾ.ಜಗನ್ನಾಥ ಕೆ, ಡಾಂಗೆ, ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರು ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಬಾಕಿ ಇರುವ ಕೆಲಸಗಳನ್ನು ಮುಗಿಸುವ ಷರತ್ತಿಗೊಳಪಟ್ಟು ದಿನಾಂಕ:01-04-2026 ರಿಂದ 31-03-2027 ರವರೆಗೆ ಒಂದು ವರ್ಷದ ಅವಧಿಗೆ ಸಬ್ಬಾಟಿಕಲ್ ರಜೆಯ ಮೇಲೆ ತೆರಳಲು ಅನುಮತಿ ನೀಡಿದ ಸಭೆಯು ಅವರು ರಜೆಯಿಂದ ಹಿಂದಿರುಗಿ ಬಂದು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಂದರ್ಭದಲ್ಲಿ ಸಬ್ಬಾಟಿಕಲ್ ರಜಾ ಅವಧಿಯಲ್ಲಿ ಸಿದ್ಧಪಡಿಸಿ ಪ್ರಕಟಿಸಿದ ಪುಸ್ತಕವನ್ನು ಸಲ್ಲಿಸಬೇಕೆಂದು ನಿರ್ಣಯಿಸಿತು.

**2026–ಸಿಂ–1.22(ಇ):** ಕೆ.ಸಿ.ಎಸ್. ಆರ್.ಪಿ.ಪಿ. ಕಾಯ್ದೆ 1973 ಹಾಗೂ 1978 ನಿಯಮಗಳನುಸಾರ ಜೇಷ್ಠತೆ ಹಾಗೂ ಅರ್ಹತೆಯ ಆಧಾರದ ಮೇರೆಗೆ ಉಪಕುಲಸಚಿವ ಹುದ್ದೆಗೆ ಸ್ಥಾನೀಕರಣ ವೇತನ ಮತ್ತು ಪಿಂಚಣಿ ನಿಗದೀಕರಣ ಮಾಡುವ ಕುರಿತು.

ಚರ್ಚೆ: ಕುಲಸಚಿವರು ಮಾತನಾಡಿ, ಶ್ರೀ ಕೆ.ಎಂ.ಶಶಿಧರ, ನಿವೃತ್ತ ಉಪಕುಲಸಚಿವರು (ಸ್ವಪ್ರ) ಇವರು ಕೆ.ಸಿ.ಎಸ್. ಆರ್.ಪಿ.ಪಿ. ಕಾಯ್ದೆ 1973 ಹಾಗೂ 1978 ನಿಯಮಗಳನುಸಾರ ಜೇಷ್ಠತೆ ಹಾಗೂ ಅರ್ಹತೆಯ ಆಧಾರದ ಮೇರೆಗೆ ಉಪಕುಲಸಚಿವ ಹುದ್ದೆಗೆ ಸ್ಥಾನೀಕರಣ ವೇತನ ಮತ್ತು ಪಿಂಚಣಿ ನಿಗದೀಕರಣ ಮಾಡುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ. ಪರಿಶೀಲಿಸಲಾಗಿ, ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:04–06–2008ರಂದು ಜರುಗಿದ ಉಪಕುಲಸಚಿವ ಹುದ್ದೆಯ ಆಯ್ಕೆ ಸಮಿತಿ ಸಭೆಯ ಶಿಫಾರಸ್ಸಿನನ್ವಯ ದಿನಾಂಕ:10–06–2008 ರಂದು ಜರುಗಿದ ಸಿಂಡಿಕೇಟ್ ಸಭೆಯ ಅನುಮೋದನೆ ಮೇರೆಗೆ ದಿನಾಂಕ:08–03–2006ರಿಂದ ಅನ್ವಯವಾಗುವಂತೆ ಖಾಯಂ ನೆಲೆಯಲ್ಲಿ ಉಪಕುಲಸಚಿವ ಹುದ್ದೆಗೆ ಬಡ್ತಿ ನೀಡಲಾಗಿರುತ್ತದೆ. ನಂತರದಲ್ಲಿ ದಿನಾಂಕ:07–03–2007 ರಿಂದ ಅನ್ವಯವಾಗುವಂತೆ ಉಪಕುಲಸಚಿವ ಹುದ್ದೆಯಲ್ಲಿನ ಸ್ಥಾನಪನ್ನ ಅವಧಿಯನ್ನು ಕೂಡ ಘೋಷಿಸಲಾಗಿತ್ತು.

ಆದರೆ, ಶ್ರೀ ಶಶಿಧರ ಕೆ.ಎಂ.ರವರ ಬ್ಯಾಚ್‌ನಲ್ಲಿ ಸಹಾಯಕ ಕುಲಸಚಿವರಾಗಿದ್ದ ಶ್ರೀ ಎಸ್.ಬಸವಣ್ಣ ಎಂಬುವವರು ಉಪಕುಲಸಚಿವರ ಹುದ್ದೆಯ ಆಯ್ಕೆಯ ಬಗ್ಗೆ ಸರ್ಕಾರಕ್ಕೆ ದೂರು ಸಲ್ಲಿಸಿದ್ದರಿಂದ ದಿನಾಂಕ:07–04–2011ರ ಸರ್ಕಾರದ ಆದೇಶದನ್ವಯ ಬಡ್ತಿಯ ಆದೇಶಗಳನ್ನು ರದ್ದುಗೊಳಿಸಿರುತ್ತದೆ. ಈ ಸಂಬಂಧ ವಿಶ್ವವಿದ್ಯಾನಿಲಯದಿಂದ ಸಮರ್ಥನೆಯನ್ನು ಸಲ್ಲಿಸಿದ್ದರೂ ಕೂಡ ಸರ್ಕಾರವು ತನ್ನ ಆದೇಶವನ್ನು ಸ್ಥಿರಗೊಳಿಸಿರುತ್ತದೆ. ಆದುದರಿಂದ, ಉಪಕುಲಸಚಿವ ಹುದ್ದೆಗೆ ಆಯ್ಕೆಯಾದ 05 ನೌಕರರು ಮಾನ್ಯ ಉಚ್ಛ ನ್ಯಾಯಾಲಯದ ಮೊರೆ ಹೋಗಿದ್ದರಿಂದ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:12–09–2012 ರಂದು ನೀಡಿದ ತೀರ್ಪಿನಲ್ಲಿ "THE WRIT PETTION NO.14389/2012 WAS DISMISSED ANNULLING THE PROMOTIONS OF THE RESPONDENTS WITH AN OBSERVATION AND LIBERTY TO CONDUCT AFRESH THE PROCESS OF PROMOTIONS TO ALL THE ELIGIBLE CANDIDATES AS PER LAW" ಎಂದು ತಿಳಿಸಿರುತ್ತದೆ.

ನ್ಯಾಯಾಲಯದ ಆದೇಶದನ್ವಯ ವಿಶ್ವವಿದ್ಯಾನಿಲಯವು ದಿನಾಂಕ:30–05–2016ರನ್ವಯ ಉಪಕುಲಸಚಿವ ಹುದ್ದೆಗೆ ಬಡ್ತಿ ನೀಡುವ ಸಂಬಂಧ ಸೇವಾ ವಿವರಗಳ ಮಾಹಿತಿಯನ್ನು 08 ಪ್ರತಿಗಳಲ್ಲಿ ಸಲ್ಲಿಸುವಂತೆ ಸಂಬಂಧಪಟ್ಟ ನೌಕರರಿಗೆ ತಿಳಿಸಿರುತ್ತದೆ. ಈ ಪ್ರಕಾರ ಶ್ರೀ ಕೆ.ಎಂ.ಶಶಿಧರ ಸೇರಿದಂತೆ ನೌಕರರು ಸೇವಾ ಮಾಹಿತಿಯನ್ನು ಸಲ್ಲಿಸುವ ಮೂಲಕ ಸ್ಥಾನಪನ್ನ ಬಡ್ತಿ ನೀಡಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಈ ನಡುವೆ ಅರ್ಜಿದಾರರಾದ ಶ್ರೀ ಕೆ.ಎಂ.ಶಶಿಧರ ರವರು ದಿನಾಂಕ:30–06–2016 ರಂದು ವಯೋನಿವೃತ್ತಿಯಾಗುವ ದಿನದವರೆಗೂ ವಿಶ್ವವಿದ್ಯಾನಿಲಯದಿಂದ ಬಡ್ತಿ ಪ್ರಕ್ರಿಯೆಗಳನ್ನು ಕೈಗೊಂಡಿರುವುದಿಲ್ಲ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಪ್ರಸ್ತುತ, ಅವರು ಸಲ್ಲಿಸಿರುವ ಮನವಿಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಕಿರಿಯ ಸಹಾಯಕ ಹುದ್ದೆಯಿಂದ ಸಹಾಯಕ ಕುಲಸಚಿವ ಹುದ್ದೆಯವರೆಗೆ ಆರ್.ಪಿ.ಪಿ., ಆಕ್ಟ್ 1973 ಹಾಗೂ 1978ರನ್ವಯ ಅರ್ಹತಾ ದಿನಾಂಕದಿಂದ ಸೌಲಭ್ಯಗಳನ್ನು ನೀಡಿದ್ದು, ನನಗೂ ಸಹ ಅದೇ ನಿಯಮಗಳನುಸಾರ ಉಪಕುಲಸಚಿವ ಹುದ್ದೆಗೆ ಸ್ಥಾನೀಕರಣ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಈ ಕುರಿತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ ಎಂದರು. ಶ್ರೀ ಬಿ.ಎನ್.ಶಶಿಧರರವರು ಮಾತನಾಡಿ, ಅವಕಾಶ ಇದ್ದಲ್ಲಿ ಅವರನ್ನೂ ಪರಿಗಣಿಸಿ ಎಂದರು. ಕುಲಸಚಿವರು ಮಾತನಾಡಿ, ಅವರು ನಿವೃತ್ತರಾಗಿ ಈಗಾಗಲೇ ಬಹಳ ವರ್ಷಗಳಾಗಿರುವುದರಿಂದ ಈ ಬಗ್ಗೆ ಸರ್ಕಾರದ ನಿರ್ದೇಶನ ಪಡೆಯಬೇಕಾಗುತ್ತದೆ ಎಂದರು. ಎಲ್ಲಾ ಸದಸ್ಯರು ಇದಕ್ಕೆ ಸಮ್ಮತಿಸಿದರು.

**ನಿರ್ಣಯ:** ಚರ್ಚೆಯ ನಂತರ ಶ್ರೀ ಕೆ.ಎಂ.ಶಶಿಧರ, ನಿವೃತ್ತ ಉಪಕುಲಸಚಿವರು (ಸ್ವತಂತ್ರ ಪ್ರಭಾರ) ಇವರಿಗೆ ಕೆ.ಸಿ.ಎಸ್., ಆರ್.ಪಿ.ಪಿ., ಕಾಯ್ದೆ 1973 ಹಾಗೂ 1978 ನಿಯಮಗಳನುಸಾರ ಜೇಷ್ಠತೆ ಹಾಗೂ ಅರ್ಹತೆಯ ಆಧಾರದ ಮೇರೆಗೆ ಉಪಕುಲಸಚಿವ ಹುದ್ದೆಗೆ ಸ್ಥಾನೀಕರಣ ವೇತನ ಮತ್ತು ಪಿಂಚಣಿ ನಿಗದೀಕರಣ ಮಾಡುವ ಕುರಿತು ಸರ್ಕಾರದ ನಿರ್ದೇಶನ ಕೋರಿ ಪತ್ರ ಬರೆಯಲು, ಹಾಗೂ ಸರ್ಕಾರ ಅನುಮತಿಸಿದಲ್ಲಿ ಅವರಿಗೆ ಲಭ್ಯ ಸೌಲಭ್ಯಗಳನ್ನು ನೀಡಬೇಕೆಂದು ನಿರ್ಣಯಿಸಲಾಯಿತು.

**2026–ಸಿಂ–1.22(ಎಫ್):** ದಿನಾಂಕ:08–01–2026ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕೇತರ ನೌಕರರುಗಳಿಗೆ ಶಾಖಾಧಿಕಾರಿ ಹುದ್ದೆಯಿಂದ ಸಹಾಯಕ ಕುಲಸಚಿವ ಹುದ್ದೆ, ಹಿರಿಯ ಸಹಾಯಕ ಹುದ್ದೆಯಿಂದ ಶಾಖಾಧಿಕಾರಿ ಹುದ್ದೆ, ಪ್ರಥಮ ದರ್ಜೆ ಸಹಾಯಕ ಹುದ್ದೆಯಿಂದ ಹಿರಿಯ ಸಹಾಯಕ ಹುದ್ದೆ ಹಾಗೂ ಕಿರಿಯ ಸಹಾಯಕ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಬಡ್ತಿ ನೀಡುವ ಸಂಬಂಧ ದಿನಾಂಕ:08–01–2026ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಲಾಯಿತು.

**2026–ಸಿಂ–1.22(ಜಿ):** ದಿವಂಗತ ಶ್ರೀಮತಿ ಕೆ.ಎಲ್.ರಮಾಮಣಿ, ಕಿರಿಯ ಸಹಾಯಕರು ಇವರ ಕುಟುಂಬಕ್ಕೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ಶ್ರೀಮತಿ ಕೆ.ಎಲ್.ರಮಾಮಣಿ ಎಂಬುವವರು ಕಿರಿಯ ಸಹಾಯಕರಾಗಿ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವಾಗಲೇ ದಿನಾಂಕ:30–08–2015ರಂದು ನಿಧನರಾಗಿದ್ದಾರೆ. ಸದರಿಯವರ ನಿಧನದ ತರುವಾಯ ಅವರ ವಿವಾಹಿತ ಹಿರಿಯ ಮಗಳಾದ ಶ್ರೀಮತಿ ಡಿ.ಎ.ಶ್ವೇತಾ ಎಂಬುವವರು ಅನುಕಂಪ ಆಧಾರದ ನೌಕರಿಯನ್ನು ನಮ್ಮ ಕುಟುಂಬದವರ ಒಮ್ಮತದ ತೀರ್ಮಾನದ ಮೇರೆಗೆ ನನಗೆ ನೀಡುವಂತೆ ಹಾಗೂ ಅಲಹಬಾದ್‌ನ ಉಚ್ಚ ನ್ಯಾಯಾಲಯವು 2015ರಲ್ಲಿ ವಿವಾಹಿತ ಹೆಣ್ಣು ಮಕ್ಕಳಿಗೆ ಅನುಕಂಪ ಆಧಾರಿತ ಉದ್ಯೋಗವನ್ನು ನಿರಾಕರಿಸುವಂತಿಲ್ಲ ಎಂದು ತೀರ್ಪು ನೀಡಿರುತ್ತದೆ ಎಂದು ತಿಳಿಸಿ ದಿನಾಂಕ:23–04–2016ರಲ್ಲಿ ಮನವಿ ಸಲ್ಲಿಸಿದ್ದರು.

ಅಂದು ಜಾರಿಯಲ್ಲಿದ್ದ ನಿಯಮಗಳ ಪ್ರಕಾರ ವಿವಾಹಿತ ಹೆಣ್ಣು ಮಕ್ಕಳಿಗೆ ಅನುಕಂಪ ಆಧಾರಿತ ಉದ್ಯೋಗ ನೀಡಲು ಅವಕಾಶವಿಲ್ಲದಿರುವುದರಿಂದ ಈ ಬಗ್ಗೆ ಮಾರ್ಗದರ್ಶನ ನೀಡುವಂತೆ ದಿನಾಂಕ:17–06–2016ರಂದು ಸರ್ಕಾರಕ್ಕೆ ಪತ್ರಿಸಲಾಗಿತ್ತು. ದಿನಾಂಕ:08–03–2017ರ ಸರ್ಕಾರದ ಪತ್ರದಲ್ಲಿ ವಿವಾಹಿತ ಹೆಣ್ಣು ಮಕ್ಕಳಿಗೆ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996ರನ್ವಯ ಅನುಕಂಪದ ಆಧಾರದ ನೇಮಕಾತಿಯನ್ನು ನೀಡಲು ಅವಕಾಶವಿರುವುದಿಲ್ಲ. ಅಲಹಾಬಾದ್ ಕೋರ್ಟ್ ತೀರ್ಪನ್ನು ಈ ನಿಯಮಗಳಡಿ ಪರಿಶೀಲಿಸಲು ಬರುವುದಿಲ್ಲ ಎಂದು ನಿರ್ದೇಶನ ನೀಡಿರುತ್ತದೆ. ಅದರಂತೆ ಸದರಿಯವರಿಗೆ ದಿನಾಂಕ:20–04–2017 ರಲ್ಲಿ ಹಿಂಬರಹ ನೀಡಲಾಗಿದೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಸದರಿಯವರು ದಿನಾಂಕ:09-04-2021ರ ಸರ್ಕಾರದ ಆದೇಶದನ್ವಯ ಅನುಕಂಪ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವಂತೆ ಮತ್ತೊಮ್ಮೆ ಮನವಿ ಸಲ್ಲಿಸಿದ್ದಾರೆ. ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ:ಸಿಆಸುಇ:26:ಸೇಅನೇ:2018 ದಿ:09-04-2021ರಲ್ಲಿ ನಿಯಮಗಳು ಶೀರ್ಷಿಕೆ ಮತ್ತು ಪ್ರಾರಂಭದ(2)ರಲ್ಲಿ ಇವು ರಾಜ್ಯ ಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಎಂದು ಪ್ರಕಟಗೊಂಡಿರುತ್ತದೆ. ಆದ್ದರಿಂದ ಇದು ದಿನಾಂಕ:09-04-2021ರ ಸರ್ಕಾರದ ಆದೇಶಕ್ಕಿಂತ ಪೂರ್ವದ ಪ್ರಕರಣವಾಗಿರುವುದರಿಂದ ಶ್ರೀಮತಿ ಡಿ.ಎ. ಶ್ವೇತಾರವರಿಗೆ ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ ಉದ್ಯೋಗ ನೀಡುವ ಕುರಿತಂತೆ ಕಾನೂನು ಅಭಿಪ್ರಾಯ ಪಡೆಯಲಾಗಿದ್ದು, ಈ ಕುರಿತು ದಿನಾಂಕ:09-04-2021 ರಿಂದ ಜಾರಿಗೆ ಬಂದ ಸರ್ಕಾರಿ ಆದೇಶದ ತಿದ್ದುಪಡಿಯು ಆದೇಶದ ದಿನಾಂಕದ ನಂತರದ ಪ್ರಕರಣಗಳಿಗೆ ಮಾತ್ರ ಅನ್ವಯವಾಗುತ್ತದೆ. ತಿದ್ದುಪಡಿ ಆದೇಶದಲ್ಲಿ ದಿನಾಂಕ:09-04-2021ರ ಪೂರ್ವದ ಬಾಕಿ ಪ್ರಕರಣಗಳ ಬಗ್ಗೆ ಪ್ರಸ್ತಾಪಿಸಿರುವುದಿಲ್ಲ. ಈ ಕಾರಣಗಳಿಂದ ಅರ್ಜಿದಾರರಾದ ಶ್ರೀಮತಿ ಡಿ.ಎ. ಶ್ವೇತಾ ಇವರು ಸರ್ಕಾರದ ತಿದ್ದುಪಡಿ ದಿನಾಂಕ:09-04-2021ರನ್ವಯ ಸೌಲಭ್ಯ ಪಡೆಯಲು ಅರ್ಹಳಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ, ಶ್ರೀಮತಿ ಡಿ.ಎ. ಶ್ವೇತಾರವರ ಕುಟುಂಬವು ಆರ್ಥಿಕ ಸಂಕಷ್ಟದಲ್ಲಿದ್ದು, ಮಾನವೀಯ ದೃಷ್ಟಿಯಿಂದ ಅವರಿಗೆ ಉದ್ಯೋಗ ನೀಡಿ ಎಂದರು. ಕುಲಸಚಿವರು ಮಾತನಾಡಿ, ಈ ಪ್ರಕರಣದ ಕುರಿತು ಮತ್ತೊಮ್ಮೆ ಸರ್ಕಾರದ ಸ್ಪಷ್ಟನೆ ಪಡೆಯಲಾಗುವುದು ಎಂದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ನೌಕರರಾಗಿದ್ದ, ಶ್ರೀಮತಿ ರಮಾಮಣಿ ಕೆ.ಎಲ್. ಇವರ ವಿವಾಹಿತ ಪುತ್ರಿಯಾದ ಶ್ರೀಮತಿ ಡಿ.ಎ.ಶ್ವೇತಾರವರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡುವ ಬಗ್ಗೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಿ, ಸರ್ಕಾರದಿಂದ ನಿರ್ದೇಶನ ಪಡೆದುಕೊಂಡು ಕ್ರಮಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

**2026-ಸಿಂ-1.22(ಹೆಚ್):** ಕುವೆಂಪು ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಹಾಸ್ಟೆಲ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಹಂಗಾಮಿ ನೌಕರರಾದ ಶ್ರೀಮತಿ ವಿಮಲಮ್ಮ, ಶ್ರೀ ಕಣ್ಣನ್, ಶ್ರೀ ನಾರಾಯಣಸ್ವಾಮಿ ಹಾಗೂ ಶ್ರೀ ರುದ್ರಪ್ಪ ಎಂ, ಇವರುಗಳು ತಮ್ಮನ್ನು ವಿಶ್ವವಿದ್ಯಾಲಯದ ಸೇವೆಯಲ್ಲಿ ವಿಲೀನೀಕರಣಗೊಳಿಸುವಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್‌ಪಿಟಿಷನ್‌ಗಳಿಗೆ ನ್ಯಾಯಾಲಯವು ದಿನಾಂಕ:09-09-2024 ರಂದು ಹೊರಡಿಸಿರುವ ಆದೇಶದಂತೆ ಕ್ರಮ ಕೈಗೊಳ್ಳುವ ಸಂಬಂಧ ಸದರಿ ನೌಕರರು ವಿಶ್ವವಿದ್ಯಾಲಯದ ಸಿಬ್ಬಂದಿಗಳಾಗಿರುವುದರಿಂದ ಸದರಿಯವರುಗಳ ಮನವಿಗಳನ್ನು ಹಾಗೂ ನ್ಯಾಯಾಲಯದ ಆದೇಶವನ್ನು ಕೂಲಂಕಷವಾಗಿ ಪರಿಶೀಲಿಸಿ, ಇವರನ್ನು ದಿನಗೂಲಿ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಆದೇಶದ ಪ್ರತಿ ಮತ್ತು ಸೇವಾ ವಿವರಗಳ ದಾಖಲೆಗಳೊಂದಿಗೆ ಈ ನೌಕರರುಗಳನ್ನು ಖಾಯಂಗೊಳಿಸುವ ಕುರಿತು ವಿಶ್ವವಿದ್ಯಾಲಯದ ಸ್ಪಷ್ಟ ಅಭಿಪ್ರಾಯವನ್ನು ತುರ್ತಾಗಿ ನೀಡುವಂತೆ ಸರ್ಕಾರವು ವಿಶ್ವವಿದ್ಯಾಲಯಕ್ಕೆ ಬರೆದ ಪತ್ರದಲ್ಲಿ ತಿಳಿಸಲಾಗಿತ್ತು.

ಉಚ್ಚ ನ್ಯಾಯಾಲಯವು ತನ್ನ ಆದೇಶದಲ್ಲಿ The impugned endorsenment bearing no. ಸಿಆಸುಇ 273 ಸೇನಿಸಿ2011 / ಇಡಿ 36 ಯುಎಸ್‌ವಿ 2011 ದಿನಾಂಕ:09-02-2012 issued by the Respondent No.2 is quashed ಹಾಗೂ the decision of the Hon'ble Apex Court in the case of State of Karnataka and others vs M.L.Kesari [(2010) 9 SCC 247], Narendra Kumar Tiwari vs State of Jharkhand [(2018) 8 SCC 238] and take appropriate decision to regularize the services of the petitioners within three months thereafter, in accordance with law ಎಂದು ತೀರ್ಪು ನೀಡಿರುತ್ತದೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಸದರಿ ನೌಕರರುಗಳು ಈಗಾಗಲೇ ಸುಮಾರು 30 ವರ್ಷಗಳಿಂದ ವಿಶ್ವವಿದ್ಯಾಲಯದಲ್ಲಿ ಹಂಗಾಮಿ ನೌಕರರಾಗಿ ಕಾರ್ಯ ನಿರ್ವಹಿಸಿದ್ದು, ಸದರಿಯವರುಗಳನ್ನು ವಿಶ್ವವಿದ್ಯಾಲಯದ ಸೇವೆಗೆ ವಿಲೀನೀಕರಣಗೊಳಿಸುವ ಸಂಬಂಧ ದಿನಾಂಕ:24-03-2025ರ ಸಿಂಡಿಕೇಟ್ ಸಭೆಯಲ್ಲಿ ಸದರಿ ನೌಕರರುಗಳನ್ನು ವಿಶ್ವವಿದ್ಯಾಲಯಕ್ಕೆ ಮಂಜೂರಾಗಿ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಖಾಯಂಗೊಳಿಸಬಹುದಾಗಿದೆ ಎಂಬ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಪತ್ರ ಬರೆಯಲು ನಿರ್ಣಯಿಸಿದ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ದಿನಾಂಕ:07-05-2025ರಂದು ಸರ್ಕಾರಕ್ಕೆ ಪತ್ರಿಸಿ ಸದರಿ ನೌಕರರನ್ನು ಖಾಯಂಗೊಳಿಸಬಹುದು ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಮಾಹಿತಿ ನೀಡಲಾಗಿತ್ತು.

ಏತನ್ಮಧ್ಯೆ, ಸದರಿ 4 ಜನ ನೌಕರರನ್ನು ಸಕ್ರಮಾತಿಗೊಳಿಸಿ ಆದೇಶ ನೀಡದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಂಖ್ಯೆ:1183/2025 ಅನ್ನು ದಾಖಲಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ಪತ್ರ ಸಂಖ್ಯೆ:ಇಡಿ 103 ಯುಎಸ್‌ವಿ 2024 ದಿನಾಂಕ:20-11-2025ರಲ್ಲಿ ನೇಮಕಾತಿ ಪ್ರಾಧಿಕಾರವು ಕುವೆಂಪು ವಿಶ್ವವಿದ್ಯಾಲಯವೇ ಆಗಿರುವುದರಿಂದ ನಿಯಮಗಳಿಗೆ ವ್ಯತಿರಿಕ್ತವಾಗದಿರುವುದನ್ನು ಖಚಿತಪಡಿಸಿಕೊಂಡು ಕ್ರಮವಹಿಸಿ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡುವಂತೆ ಹಾಗೂ ರಿಟ್ ಅಪೀಲು ಸಲ್ಲಿಸುವ ಬಗ್ಗೆ ಕ್ರಮವಹಿಸುವಂತೆ ನಿರ್ದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶ ಹಾಗೂ ಸರ್ಕಾರದ ಪತ್ರಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಕಾನೂನು ಸಲಹೆಗಾರರಿಂದ ಅಭಿಪ್ರಾಯ ಪಡೆದಿದ್ದು, ಕಾನೂನು ಸಲಹೆಗಾರರು ಸದರಿ ಪ್ರಕರಣದ ಕುರಿತು ಸರ್ಕಾರದ ಆದೇಶಗಳು ಹಾಗೂ ನ್ಯಾಯಾಲಯದ ಇತರೆ ತೀರ್ಪುಗಳನ್ನು ಪರಿಶೀಲಿಸಿ the University could well issue an endorsment referring to the directions of the Government ಎಂದು ಅಭಿಪ್ರಾಯ ನೀಡಿದ್ದು, ಪ್ರಸ್ತುತ ಸರ್ಕಾರದ ಪತ್ರ ಸಂಖ್ಯೆ:ಇಡಿ 103 ಯುಎಸ್‌ವಿ 2024 ದಿನಾಂಕ:08-12-2025ರಲ್ಲಿ ವಿಶ್ವವಿದ್ಯಾಲಯವು ಈಗಾಗಲೇ ಸರ್ಕಾರವು ನಿರ್ದೇಶನ ನೀಡಿರುವಂತೆ ತುರ್ತಾಗಿ ಕ್ರಮವಹಿಸಿ ಅನುಪಾಲನ ವರದಿಯನ್ನು 02 ದಿನಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಅನುಪಾಲನ ವರದಿಯನ್ನು ಸಲ್ಲಿಸುವ ಸಂಬಂಧ ಕೈಗೊಳ್ಳಬೇಕಾದ ಕ್ರಮದ ಕುರಿತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ ಎಂದರು. ನಿಯಮಾನುಸಾರ ಅವಕಾಶವಿದ್ದಲ್ಲಿ ಸರ್ಕಾರದ ಅನುಮೋದನೆ ಪಡೆದುಕೊಂಡು ಅವರನ್ನು ಸೇವೆಯಲ್ಲಿ ವಿಲೀನೀಕರಣಗೊಳಿಸುವಂತೆ ಎಲ್ಲಾ ಸದಸ್ಯರು ತಿಳಿಸಿದರು.

**ನಿರ್ಣಯ:** ಚರ್ಚೆಯ ನಂತರ, ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರದ ಸುತ್ತೋಲೆಗಳು, ಸರ್ಕಾರದ ಆದೇಶಗಳು, ಸರ್ಕಾರದಿಂದ ಬಂದಿರುವ ಪತ್ರಗಳು ಮತ್ತು ನ್ಯಾಯಾಲಯದ ಆದೇಶಗಳನ್ನು ಪರಿಶೀಲಿಸಿ ಅವರ ಶೈಕ್ಷಣಿಕ ಮತ್ತು ಇತರೆ ಅರ್ಹತೆಗಳನ್ನು ಪರಿಗಣಿಸಿ, ಅರ್ಹರಿದ್ದಲ್ಲಿ ವಿಲೀನೀಕರಣಗೊಳಿಸುವ ಕುರಿತು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

## ದೂರ ಶಿಕ್ಷಣ ನಿರ್ದೇಶನಾಲಯ

**2026-ಸಿಂ-1.23:** ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಬರಬೇಕಾದ ಬಾಕಿ ಶುಲ್ಕ ವಸೂಲಾತಿಗೆ ಕ್ರಮ ಕೈಗೊಳ್ಳುವ ಸಂಬಂಧ ಅಧ್ಯಯನ ಕೇಂದ್ರದ ಪ್ರಾಂಶುಪಾಲರು/ಸಂಯೋಜನಾಧಿಕಾರಿಗಳೊಂದಿಗಿನ ಸಭೆ ಕುರಿತು.

**ಚರ್ಚೆ:** ಸಭೆಗೆ ವಿಶೇಷ ಆಹ್ವಾನಿತರಾಗಿದ್ದ ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಜಗನ್ನಾಥ ಕೆ.ಡಾಂಗೆರವರು ಮಾತನಾಡಿ, ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಕೆಲವು ಅಧ್ಯಯನ ಕೇಂದ್ರಗಳವರು ಬಾಕಿ ಉಳಿಸಿಕೊಂಡಿದ್ದ ಶುಲ್ಕವನ್ನು ವಸೂಲು ಮಾಡುವ ಸಂಬಂಧ ಅಧ್ಯಯನ ಕೇಂದ್ರದವರನ್ನು ವಿಶ್ವವಿದ್ಯಾಲಯಕ್ಕೆ ಕರೆಸಿ ಎಲ್ಲಾ ಸಿಂಡಿಕೇಟ್ ಸದಸ್ಯರ ಸಮ್ಮುಖದಲ್ಲಿ ಅವರೊಂದಿಗೆ ಚರ್ಚಿಸಿ ನಿರ್ಣಯಿಸಬೇಕೆಂದು ದಿನಾಂಕ:12-08-2025ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಈ ಹಿನ್ನೆಲೆಯಲ್ಲಿ, ಸಿಂಡಿಕೇಟ್ ಸಭೆ ನಿಗದಿಯಾಗಿದ್ದ ದಿನಾಂಕ:09-01-2026 ರಂದು ವಿಶ್ವವಿದ್ಯಾಲಯಕ್ಕೆ ಬರುವಂತೆ ಸಂಬಂಧಪಟ್ಟ 08 ಅಧ್ಯಯನ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಕೇಂದ್ರದವರಿಗೆ ಪತ್ರಿಸಲಾಗಿತ್ತು. ಇದರಲ್ಲಿ 4 ಅಧ್ಯಯನ ಕೇಂದ್ರದವರು ಸ್ವೀಕರಿಸಿದ ಕಾರಣ ಪತ್ರಗಳು ಅಂಚೆ ಕಛೇರಿಯಿಂದ ಹಿಂದಿರುಗಿ ಬಂದಿವೆ. ಉಳಿದ 4 ಕೇಂದ್ರದವರು ಪತ್ರ ಸ್ವೀಕರಿಸಿದ್ದಾರೆ. ಆದರೆ, ಇಂದು ಯಾರೂ ವಿಶ್ವವಿದ್ಯಾಲಯಕ್ಕೆ ಬಂದಿಲ್ಲ ಎಂದರು.

ಶ್ರೀ ಕೆ.ಪಿ.ಶ್ರೀಪಾಲ್ ಹಾಗೂ ಶ್ರೀ ಅರವಿಂದ್‌ರವರು ಮಾತನಾಡಿ, ಪತ್ರ ಸ್ವೀಕರಿಸದಿದ್ದವರ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಬೇಕೆಂದರು. ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ಅಧ್ಯಯನ ಕೇಂದ್ರ ನೋಂದಣಿಯಾಗಿರುವ ಮುಖ್ಯಸ್ಥರನ್ನೇ ಪಾರ್ಟಿ ಮಾಡಿ ದಾವೆ ಹೂಡಿದರೆ ಒಳ್ಳೆಯದೆಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ, ಇದು ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕವಾಗಿದ್ದು, ಸಾರ್ವಜನಿಕ ಹಣವಾಗುತ್ತದೆ. ಅಲ್ಲದೇ ಶಿಕ್ಷಣ ಸಂಸ್ಥೆಗೆ ಮೋಸ ಮಾಡಿರುವುದನ್ನು ಹೈಲೈಟ್ ಮಾಡಿ ದೂರು ನೀಡಿ ಎಫ್.ಐ.ಆರ್. ಹೂಡಬಹುದು ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ವಿಶ್ವವಿದ್ಯಾಲಯವು ಆರ್ಥಿಕ ಬಿಕ್ಕಟ್ಟಿನಲ್ಲಿರುವುದರಿಂದ ಬರಬೇಕಾಗಿರುವ ಬಾಕಿ ಹಣ ವಸೂಲಾತಿಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದು ಅಗತ್ಯ ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಈಗಾಗಲೇ 03 ವರ್ಷ ಆಗಿರುವುದರಿಂದ ಕಾನೂನು ಅಭಿಪ್ರಾಯ ಪಡೆದುಕೊಳ್ಳಬೇಕು. ಇದು ಕೋಟ್ಯಂತರ ರೂಪಾಯಿಗಳ ಹಣಕಾಸಿನ ವ್ಯವಹಾರವಾಗಿರುವುದರಿಂದ ಈ ಬಗ್ಗೆ ಗ್ರೌಂಡ್‌ವರ್ಕ್ ಮಾಡಿಕೊಂಡು ಸಿ.ಐ.ಡಿ.ಗೆ ಕೊಡಬಹುದಾ ಎಂಬುದರ ಕುರಿತಾಗಿ ಪರಿಶೀಲಿಸಿ ನಿರ್ಣಯಿಸುವುದು ಒಳ್ಳೆಯದು ಎಂದರು.

**ನಿರ್ಣಯ:** ಚರ್ಚೆಯ ನಂತರ, ಅಧ್ಯಯನ ಕೇಂದ್ರದವರು ಸಾರ್ವಜನಿಕರ ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ. ವಿಶ್ವವಿದ್ಯಾಲಯವು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಬಾಕಿ ವಸೂಲಾತಿಗೆ ಕಾನೂನು ಕ್ರಮ ಕೈಗೊಳ್ಳುವುದು ಅಗತ್ಯ. ಇದು ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಒಳಗೊಂಡಿರುವುದರಿಂದ, ಈ ಬಗ್ಗೆ ಪರಿಶೀಲಿಸಲು ಸಂಬಂಧಪಟ್ಟ ಕಡತಗಳನ್ನು ಶ್ರೀ ಕೆ.ಪಿ.ಶ್ರೀಪಾಲ್‌ರವರಿಗೆ ನೀಡುವುದು. ಅವರು ಪರಿಶೀಲಿಸಿ ವರದಿ ನೀಡಿದ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

## ದೈಹಿಕ ಶಿಕ್ಷಣ ವಿಭಾಗ

**2026–ಸಿಂ–1.24:** ದಿನಾಂಕ:06–10–2025 ರಂದು ನಡೆದ ಕ್ರೀಡಾ ಸಲಹಾ ಸಮಿತಿ ಸಭೆ ನಡಾವಳಿ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:06–10–2025 ರಂದು ನಡೆದ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

**2026–ಸಿಂ–1.25:** ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು/ಕಛೇರಿಗಳಿಗೆ ಪೀಠೋಪಕರಣಗಳನ್ನು ಸರಬರಾಜು ಮಾಡುವ ಸಂಬಂಧದ ಇ–ಟೆಂಡರ್ ಅಂಗೀಕರಿಸಿ ದರ ಒಪ್ಪಂದ ಮಾಡಿಕೊಂಡಿರುವ ಕುರಿತು.

**ನಿರ್ಣಯ:** ಚರ್ಚೆಯ ನಂತರ, ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಕಛೇರಿಗಳು/ಘಟಕ ಕಾಲೇಜುಗಳಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ಸರಬರಾಜು ಮಾಡುವ ಸಂಬಂಧ ನಡೆಸಲಾದ ಇ–ಟೆಂಡರ್ ಪ್ರಕ್ರಿಯೆಯಲ್ಲಿ ಶ್ರೀ ಗುರು ಇಂಟೀರಿಯರ್ಸ್, ಶಿವಮೊಗ್ಗ ಇವರು ಎಲ್–1 ಆಗಿದ್ದು, ವಿಶ್ವವಿದ್ಯಾಲಯಕ್ಕೆ ಹಾಗೂ ಕಾಲೇಜುಗಳಿಗೆ ಪೀಠೋಪಕರಣಗಳ ತುರ್ತು ಅಗತ್ಯವಿದ್ದುದ್ದರಿಂದ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ದರ ಒಪ್ಪಂದ ಮಾಡಿಕೊಂಡ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

**2026–ಸಿಂ–1.25(ಎ):** ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಔಷಧಿ/ಲ್ಯಾಬ್ ಕೆಮಿಕಲ್ಸ್/ಉಪಕರಣ ಖರೀದಿಸಲು ದರ ಒಪ್ಪಂದಕ್ಕಾಗಿ ಮರು ಇ–ಟೆಂಡರ್ ಕರೆಯುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಔಷದಿಗಳು, ಲ್ಯಾಬೋರೇಟರಿ ಕೆಮಿಕಲ್ಸ್ ಮತ್ತು ಉಪಕರಣಗಳನ್ನು ಖರೀದಿಸಲು ನಡೆಸಲಾದ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿದ್ದ ಸರಬರಾಜು ಸಂಸ್ಥೆಗಳು ಹಣಕಾಸಿನ ಬಿಡ್‌ನಲ್ಲಿ ಸಲ್ಲಿಸಿದ್ದ ಸಾಮಗ್ರಿಗಳ Quantity, Number, Gm ಇತ್ಯಾದಿ ಅಳತೆ ಮಾಪಕ ಮತ್ತು Specificationಗಳಲ್ಲಿ ಗೊಂದಲವಿದ್ದುದ್ದರಿಂದ ಅವರು ನಮೂದಿಸಿದ್ದ ದರಗಳಲ್ಲಿ ಕೂಡ ವ್ಯತ್ಯಾಸವಾಗಿದ್ದು, ಕೆಲವನ್ನು ಮಾರುಕಟ್ಟೆ ದರಗಳಿಗೆ ಹೋಲಿಕೆ ಮಾಡಲು ಸಾಧ್ಯವಾಗದ ಕಾರಣದಿಂದ ಟೆಂಡರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ, ಇ–ಟೆಂಡರ್‌ನ್ನು ರದ್ದುಪಡಿಸಲು ಮತ್ತು ಹೊಸದಾಗಿ ಮರು ಟೆಂಡರ್ ಕರೆಯಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**2026–ಸಿಂ–1.25(ಬಿ):** ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇಲ್ಲಿಗೆ ರೂಸಾ ಅನುದಾನದಲ್ಲಿ ಡೆಸ್ಕ್‌ಟಾಪ್ ಕಂಪ್ಯೂಟರ್ಸ್ ಖರೀದಿಸಲು ದರ ಒಪ್ಪಂದಕ್ಕಾಗಿ ಮರು ಇ–ಟೆಂಡರ್ ಕರೆಯುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಶಿವಮೊಗ್ಗದ ಸಹ್ಯಾದ್ರಿ ವಿಜ್ಞಾನ ಕಾಲೇಜಿಗೆ ಸರ್ಕಾರದಿಂದ ಮಂಜೂರಾಗಿರುವ ರೂಸಾ ಅನುದಾನದಲ್ಲಿ ರೂ.20.00ಲಕ್ಷಗಳ ಮೌಲ್ಯದ ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳನ್ನು ಖರೀದಿಸಲು ನಡೆಸಲಾದ ಇ–ಟೆಂಡರ್ ಪ್ರಕ್ರಿಯೆಯಲ್ಲಿ ಉಳಿದ ಸಂಸ್ಥೆಗಳಿಗಿಂತ ಕಡಿಮೆ ದರ ನಮೂದಿಸಿ ಎಲ್–1 ಆಗಿದ್ದ, M/s Gen Next Computer, Bijapur ಇವರ ಟೆಂಡರ್‌ನ್ನು ಅನುಮೋದಿಸಿದ್ದ ಹಿನ್ನೆಲೆಯಲ್ಲಿ, ರೂ.1.00ಲಕ್ಷಗಳ ಮೊತ್ತದ ಬ್ಯಾಂಕ್ ಗ್ಯಾರಂಟಿ ನೀಡಿ, ಕರಾರು ಒಪ್ಪಂದ ಮಾಡಿಕೊಳ್ಳುವಂತೆ ದಿನಾಂಕ:20–05–2025ರಂದು ಪತ್ರಿಸಲಾಗಿದ್ದು, ಸಂಸ್ಥೆಯವರಿಂದ ಯಾವುದೇ ಪ್ರತಿಕ್ರಿಯೆ ಬಾರದ ಕಾರಣ ಮತ್ತೆರಡು ನೆನಪೋಲೆಗಳನ್ನು ಕಳುಹಿಸಿದ್ದಾಗ್ಯೂ ಕೂಡ ಅವರು ಪ್ರತಿಕ್ರಿಯಿಸದಿರುವುದರಿಂದ ಸದರಿ ಟೆಂಡರ್‌ನ್ನು ರದ್ದುಗೊಳಿಸಿ ಮರುಟೆಂಡರ್ ಕರೆಯುಲು ಸಭೆಯು ನಿರ್ಣಯಿಸಿತು.

**2026–ಸಿಂ–1.25(ಸಿ):** ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಛೇರಿಗಳಿಗೆ Laser Multifunction Printer ಗಳನ್ನು ಖರೀದಿಸಲು ದರ ಒಪ್ಪಂದಕ್ಕಾಗಿ ಮರು ಇ–ಟೆಂಡರ್ ಕರೆಯುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಕಛೇರಿಗಳು/ಘಟಕ ಕಾಲೇಜುಗಳಿಗೆ ಅಗತ್ಯತೆಗೆ ಅನುಗುಣವಾಗಿ Laser Multifunction Printer ಗಳನ್ನು ಖರೀದಿಸಲು ದರ ಒಪ್ಪಂದ ಮಾಡಿಕೊಳ್ಳುವ ಸಲುವಾಗಿ ನಡೆಸಲಾದ ಇ–ಟೆಂಡರ್‌ನಲ್ಲಿ ಮೆ.ಯಶಸ್ವಿನಿ ಟೆಕ್ನಾಲಜೀಸ್, ಶಿವಮೊಗ್ಗ ಇವರು ಉಳಿದವರಿಗಿಂತ ಕಡಿಮೆ ದರ ನಮೂದಿಸಿ ಎಲ್–1 ಆಗಿದ್ದರಿಂದ ಸದರಿಯವರ ಟೆಂಡರ್‌ನ್ನು ಅನುಮೋದಿಸಿದ್ದ ಹಿನ್ನೆಲೆಯಲ್ಲಿ, ರೂ.25,000/–ಗಳ ಮೊತ್ತದ ಬ್ಯಾಂಕ್ ಗ್ಯಾರಂಟಿ ನೀಡಿ, ಕರಾರು ಒಪ್ಪಂದ ಮಾಡಿಕೊಳ್ಳುವಂತೆ ದಿನಾಂಕ:08–09–2025ರಂದು ಪತ್ರಿಸಲಾಗಿದ್ದು, ಸರಬರಾಜು ಸಂಸ್ಥೆಯವರಿಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದರಿಂದ ಮತ್ತೆರಡು ನೆನಪೋಲೆಗಳನ್ನು ಕಳುಹಿಸಿದ್ದಾಗ್ಯೂ ಅವರು ಪ್ರತಿಕ್ರಿಯಿಸದ ಕಾರಣ ಸದರಿ ಟೆಂಡರ್‌ನ್ನು ರದ್ದುಗೊಳಿಸಿ ಮರುಟೆಂಡರ್ ಕರೆಯಲು ಸಭೆಯು ನಿರ್ಣಯಿಸಿತು.

**2026–ಸಿಂ–1.25(ಡಿ):** ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಛೇರಿಗಳಿಗೆ Desktop Computers ಗಳನ್ನು ಸರಬರಾಜು ಮಾಡುವ ಸಂಬಂಧ ಇ–ಟೆಂಡರ್ ಅಂಗೀಕರಿಸಿ ದರ ಒಪ್ಪಂದ ಮಾಡಿಕೊಂಡಿರುವ ಕುರಿತು.

**ನಿರ್ಣಯ:** ಚರ್ಚೆಯ ನಂತರ, ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಕಛೇರಿಗಳು/ ಘಟಕ ಕಾಲೇಜುಗಳಿಗೆ ಅಗತ್ಯವಿರುವ ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳನ್ನು ಸರಬರಾಜು ಮಾಡುವ ಸಂಬಂಧ ನಡೆಸಲಾದ ಇ–ಟೆಂಡರ್ ಪ್ರಕ್ರಿಯೆಯಲ್ಲಿ ಮೆ:ನಿರಂತರ ಎಂಟರ್‌ಪ್ರೈಸಸ್, ದಾವಣಗೆರೆ ಇವರು ಎಲ್–1 ಆಗಿದ್ದು, ವಿಶ್ವವಿದ್ಯಾಲಯಕ್ಕೆ ಹಾಗೂ ಕಾಲೇಜುಗಳಿಗೆ ಪೀಠೋಪಕರಣಗಳ ತುರ್ತು ಅಗತ್ಯವಿದ್ದುದ್ದರಿಂದ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಮಾನ್ಯ ಕುಲಪತಿಯವರ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಅನುಮೋದನೆ ಮೇರೆಗೆ ದರ ಒಪ್ಪಂದ ಮಾಡಿಕೊಂಡ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

## ಪ್ರಾಧಿಕಾರ ವಿಭಾಗ

**2026–ಸಿಂ–1.26:** ದಿನಾಂಕ:10–10–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ದಿನಾಂಕ:10–10–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣದ ವಿಷಯವನ್ನು ಮುಂದೂಡಲಾಯಿತು.

**2026–ಸಿಂ–1.27:** ದಿನಾಂಕ: 10–10–2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ನಿರ್ಣಯ:** ದಿನಾಂಕ:10–10–2025ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯ ಅನುಮೋದನೆಯನ್ನು ಮುಂದೂಡಲಾಯಿತು.

## ಪರೀಕ್ಷಾ ವಿಭಾಗ

**2026–ಸಿಂ–1.28:** ಜನವರಿ–2026ನೇ ಸಾಲಿನಲ್ಲಿ ನಡೆಯಲಿರುವ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಆಂತರಿಕ ಮೌಲ್ಯಮಾಪಕರಿಂದ (Internal Evaluators) ಮೌಲ್ಯಮಾಪನ ಮಾಡಿಸುವ ಬಗ್ಗೆ.

**ಚರ್ಚೆ:** ಕುಲಸಲಚಿವ (ಮೌಲ್ಯಮಾಪನ)ರವರು ಮಾತನಾಡಿ, ನಮ್ಮ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪರೀಕ್ಷೆಯ ಉತ್ತರಪತ್ರಿಕೆಗಳ ಮೌಲ್ಯಮಾಪನವನ್ನು ಒಬ್ಬರು ಆಂತರಿಕ ಮತ್ತು ಒಬ್ಬರು ಬಾಹ್ಯ ಪರೀಕ್ಷಕರು ಸೇರಿದಂತೆ ದ್ವಿ ಮೌಲ್ಯಮಾಪನ ಪದ್ಧತಿಯಲ್ಲಿ ಮಾಡಿಸಲಾಗುತ್ತಿದೆ. ಸಕಾಲದಲ್ಲಿ ಬಾಹ್ಯ ಪರೀಕ್ಷಕರು ಲಭ್ಯವಾಗದ ಕಾರಣದಿಂದ ಮೌಲ್ಯಮಾಪನ ಕಾರ್ಯದಲ್ಲಿ ವಿಪರೀತ ವಿಳಂಬವಾಗಿ ಫಲಿತಾಂಶ ನೀಡಲು ತಡವಾಗುತ್ತಿದೆ. ಜುಲೈ–ಆಗಸ್ಟ್–2025 ಮಾಹೆಯಲ್ಲಿ ನಡೆದ ಕೆಲವು ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಪರೀಕ್ಷಾ ಮೌಲ್ಯಮಾಪನ ಈವರೆಗೂ ಮುಗಿಯದ ಕಾರಣ ಫಲಿತಾಂಶ ನೀಡಲಾಗುತ್ತಿಲ್ಲ. ಯು.ಜಿ.ಸಿ. ನೆಟ್ ಮತ್ತು ಕೆ–ಸೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಅಂಕಪಟ್ಟಿಗಳನ್ನು ಸಲ್ಲಿಸದೇ ಪ್ರಮಾಣಪತ್ರ ಪಡೆಯಲು ಆಗುತ್ತಿಲ್ಲ. ಕೆಲ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳು ಹಾಗೂ ಸಂಶೋಧನಾ ಸಂಸ್ಥೆಗಳಲ್ಲಿ ಪಿಹೆಚ್.ಡಿ. ಸಂಶೋಧನೆಯ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಉದ್ಯೋಗ ಪಡೆದುಕೊಂಡಿರುವವರು ಫಲಿತಾಂಶ ಪ್ರಕಟವಾಗದ ಕಾರಣದಿಂದ ನಾಲ್ಕನೇ ಸೆಮಿಸ್ಟರ್ ಅಂಕಪಟ್ಟಿಗಳನ್ನು ಸಲ್ಲಿಸಲು ಸಾಧ್ಯವಾಗದೇ ಉದ್ಯೋಗವನ್ನೇ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ರಾಜ್ಯದ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳ ಮೌಲ್ಯಮಾಪನವನ್ನು ಆಂತರಿಕ ಪರೀಕ್ಷಕರಿಂದ ಮಾತ್ರವೇ ಮಾಡಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಜನವರಿ–2026ರಿಂದ ನಂತರದಲ್ಲಿ ನಡೆಯುವ ಸ್ನಾತಕೋತ್ತರ ಪರೀಕ್ಷೆಗಳ ಉತ್ತರಪತ್ರಿಕೆಗಳ ಮೌಲ್ಯಮಾಪನವನ್ನು ಆಂತರಿಕ ಪರೀಕ್ಷಕರಿಂದಲೇ ನಡೆಸುವ ಕುರಿತು ಅನುಮೋದನೆಗಾಗಿ ಸಲ್ಲಿಸಿದೆ ಎಂದರು.

ಪ್ರೊ.ಆರ್.ಹಿರೇಮಣಿನಾಯ್ಕ್‌ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಆಂತರಿಕ ಮೌಲ್ಯಮಾಪಕರು ಕೂಡ ಕಡಿಮೆ ಇದ್ದಾರೆ. ಕೆಲವು ವಿಷಯಗಳಲ್ಲಿದ್ದ ಖಾಯಂ ಅಧ್ಯಾಪಕರುಗಳು ವಯೋನಿವೃತ್ತಿ ಹೊಂದಿದ್ದು, ಯಾವುದೇ ಖಾಯಂ ಅಧ್ಯಾಪಕರು ಇಲ್ಲದ ವಿಭಾಗಗಳಲ್ಲಿ ಆಂತರಿಕ ಮೌಲ್ಯಮಾಪಕರು ಕೂಡ ದೊರೆಯುವುದಿಲ್ಲ, ಕೇವಲ ಆಂತರಿಕ ಮೌಲ್ಯಮಾಪನವನ್ನಷ್ಟೇ ಮಾಡಿಸಿದರೆ ತಾಂತ್ರಿಕ ಸಮಸ್ಯೆಯಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಬಹುದು ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಪ್ರಸ್ತುತ ಕೆಲವು ಅಧ್ಯಾಪಕರು ಅವರು ಬೋಧಿಸದ ಪತ್ರಿಕೆಯೂ ಸೇರಿದಂತೆ ಹಲವು ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುತ್ತಾರೆ. ಮೌಲ್ಯಮಾಪಕರ ಕೊರತೆ ನೀಗಿಸಲು ಸಂಯೋಜಿತ ಮತ್ತು ಘಟಕ ಕಾಲೇಜುಗಳಲ್ಲಿ ಸ್ನಾತಕೋತ್ತರ ವಿಷಯದ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಬೋಧನೆಯಲ್ಲಿ ಕನಿಷ್ಠ 03 ವರ್ಷಗಳ ಸೇವಾ ಅನುಭವ ಹೊಂದಿರುವ ಖಾಯಂ ಅಧ್ಯಾಪಕರನ್ನು ಸ್ನಾತಕೋತ್ತರ ಉತ್ತರ ಪತ್ರಗಳ ಮೌಲ್ಯಮಾಪಕರಾಗಿ ಬಳಸಿಕೊಳ್ಳಬಹುದು. ಆದರೆ, ಅವರು ಬೋಧಿಸುವ ಪತ್ರಿಕೆಯನ್ನು ಮಾತ್ರವೇ ಮೌಲ್ಯಮಾಪನ ಮಾಡಬೇಕಾಗುತ್ತದೆ. ಮರು ಮೌಲ್ಯಮಾಪನ ಮತ್ತು ಸವಾಲಿನ ಮೌಲ್ಯಮಾಪನವನ್ನು ಬಾಹ್ಯ ಪರೀಕ್ಷಕರಿಂದಲೇ ನಡೆಸಬಹುದು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಪದವಿ ಕಾಲೇಜುಗಳಲ್ಲಿ ಸ್ನಾತಕೋತ್ತರ ವಿಷಯಗಳನ್ನು ಬೋಧಿಸುವ ಅಧ್ಯಾಪಕರು ಕೂಡ ಅವರವರ ವಿಷಯದಲ್ಲಿ ಸಾಕಷ್ಟು ಅನುಭವ ಹೊಂದಿದ್ದು, ಕೆಲವರು ತಜ್ಞರಿದ್ದು, ಪಿಹೆಚ್.ಡಿ. ಮಾರ್ಗದರ್ಶಕರು ಕೂಡ ಆಗಿದ್ದಾರೆ. ಅವರುಗಳನ್ನು ಕೂಡ ಮೌಲ್ಯಮಾಪನ ಸೇರಿದಂತೆ ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳಿಗೆ ಬಳಸಿಕೊಳ್ಳಬಹುದು ಎಂದರು.

**ನಿರ್ಣಯ:** ಚರ್ಚೆಯ ನಂತರ, ಸ್ನಾತಕೋತ್ತರ ಪದವಿಯ ಸೆಮಿಸ್ಟರ್ ಪರೀಕ್ಷೆಗಳ ಉತ್ತರಪತ್ರಿಕೆ ಮೌಲ್ಯಮಾಪನದ ವಿಳಂಬದಿಂದಾಗಿ ಸಕಾಲದಲ್ಲಿ ಫಲಿತಾಂಶ ಪ್ರಕಟವಾಗದೇ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಜನವರಿ–2026 ಮತ್ತು ನಂತರದಲ್ಲಿ ನಡೆಯುವ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಮೌಲ್ಯಮಾಪನವನ್ನು ಆಂತರಿಕ ಸದಸ್ಯರಿಂದ ಮಾತ್ರ ಮಾಡಿಸಲು ಮತ್ತು ಮೌಲ್ಯಮಾಪಕರ ಕೊರತೆ ಇರುವ ಹಿನ್ನೆಲೆಯಲ್ಲಿ ಸಂಯೋಜಿತ ಮತ್ತು ಘಟಕ ಕಾಲೇಜುಗಳಲ್ಲಿ ಸ್ನಾತಕೋತ್ತರ ವಿಷಯದ ಬೋಧನೆಯಲ್ಲಿ ಕನಿಷ್ಠ 03 ವರ್ಷಗಳ ಸೇವಾ ಅನುಭವ ಹೊಂದಿರುವ ಖಾಯಂ ಅಧ್ಯಾಪಕರನ್ನು ಅವರು ಬೋಧಿಸುವ ಮತ್ತು ಪರಿಣಿತಿ ಹೊಂದಿರುವ ನಿರ್ದಿಷ್ಟ ಪತ್ರಿಕೆಯ ಸ್ನಾತಕೋತ್ತರ ಉತ್ತರ ಪತ್ರಿಕೆಗಳ ಮೌಲ್ಯಮಾಪಕರಾಗಿ ಬಳಸಿಕೊಳ್ಳಲು ಅನುಮೋದಿಸಿದ ಸಭೆಯು, ಮರು ಮೌಲ್ಯಮಾಪನ ಮತ್ತು ಸವಾಲಿನ ಮೌಲ್ಯಮಾಪನವನ್ನು ಬಾಹ್ಯ ಪರೀಕ್ಷಕರಿಂದಲೇ ಮಾಡಿಸಬೇಕೆಂದು ಮತ್ತು ಸ್ನಾತಕೋತ್ತರ ವಿಭಾಗಗಳು ಹಾಗೂ ಘಟಕ ಕಾಲೇಜುಗಳಲ್ಲಿ ಸ್ನಾತಕೋತ್ತರ ತರಗತಿಗಳಿಗೆ ಬೋಧಿಸುವ ಖಾಯಂ ಅಧ್ಯಾಪಕರು ಲಭ್ಯವಿಲ್ಲದ ವಿಷಯಗಳಿಗೆ ಬಾಹ್ಯ ಮೌಲ್ಯಮಾಪಕರನ್ನು ಬಳಸಿಕೊಳ್ಳಬೇಕೆಂದು ನಿರ್ಣಯಿಸಿತು.

## ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗ

**2026–ಸಿಂ–1.29:** ಕೇಂದ್ರ ಸರ್ಕಾರದ 'ಗ್ಯಾನ್ ಭಾರತಂ ಮಿಶನ್' ಯೋಜನೆಯಡಿ ಕೆಳದಿ ವಸ್ತು ಸಂಗ್ರಹಾಲಯದ ಪ್ರಾಚೀನ ಹಸ್ತ ಪ್ರತಿಗಳ ಸಂರಕ್ಷಣೆಗೆ ಡಿಜಿಟಲೈಸೇಶನ್ ಸಂಬಂಧ ಆರ್ಥಿಕ ಹಾಗೂ ತಾಂತ್ರಿಕ ನೆರವು ಪಡೆಯಲು MoU ಮಾಡಿಕೊಳ್ಳುವ ಕುರಿತು.

**ನಿರ್ಣಯ:** ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಸೂಚನೆಯಂತೆ, ಪ್ರಾಚೀನ ಹಸ್ತಪ್ರತಿಗಳು ನಮ್ಮ ಮುಂದಿನ ಪೀಳಿಗೆಗೆ ನಮ್ಮ ಪರಂಪರೆಯ ಬಗ್ಗೆ ತಿಳಿಸುವ ಅತ್ಯಂತ ಅವಶ್ಯಕ ಮಾಹಿತಿಗಳನ್ನು ಒಳಗೊಂಡಿದ್ದು, ವಿಶ್ವವಿದ್ಯಾಲಯದ ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರದಲ್ಲಿರುವ ಅತೀ ಅಮೂಲ್ಯವಾದ ತಾಳೆಗರಿಗಳು, ಹಸ್ತಪ್ರತಿಗಳು ಮುಂತಾದವುಗಳನ್ನು ಪಾರಂಪರಿಕ ಮತ್ತು ಹಸ್ತಪ್ರತಿಗಳ ಸಂರಕ್ಷಣೆಗಾಗಿ ಡಿಜಿಟಲೈಜೇಶನ್ ಮಾಡುವ ಸಲುವಾಗಿ ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದಡಿಯಲ್ಲಿನ "ಗ್ಯಾನ್ ಭಾರತ್ ಮಿಷನ್" ಯೋಜನೆಯಡಿಯಲ್ಲಿ ಆರ್ಥಿಕ ಮತ್ತು ತಾಂತ್ರಿಕ ನೆರವು ಪಡೆಯಲು ವಿಶ್ವವಿದ್ಯಾಲಯವು ಒಪ್ಪಂದ ಮಾಡಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2026–ಸಿಂ–1.30:** **ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು**

**ಯಾವುದೂ ಇಲ್ಲ**

**2026–ಸಿಂ–1.31:** **ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**ಯಾವುದೂ ಇಲ್ಲ**

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

**202?–ಸಿಂ–1.32:** **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2026–ಸಿಂ–1.32(ಎ–1):** **ಶ್ರೀ ಮುಸಾವೀರ್ ಬಾಷಾ: Third Party Inspection ಆಗಿಲ್ಲದ ಕುರಿತು.**

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ನ್ಯಾಕ್ ಭೇಟಿ ಹಿನ್ನೆಲೆಯಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲು ಸಿಂಡಿಕೇಟ್ ಸಭೆಯಲ್ಲಿ ಅನುಮತಿ ನೀಡಲಾಗಿದ್ದು, ಸದರಿ ಕೋಟ್ಯಾಂತರ ರೂಪಾಯಿಗಳ ಮೌಲ್ಯದ ಕಾಮಗಾರಿಗಳ ಬಿಲ್ಲನ್ನು ಪಾವತಿಸುವ ಮುನ್ನ Third Party Inspection ಮಾಡಿಸುವ ಸಲುವಾಗಿ ಸಿಂಡಿಕೇಟ್ ಸದಸ್ಯರಾದ ಶ್ರೀ ಲಕ್ಷ್ಮಿಕಾಂತ ಚಿಮನೂರ್ ಮತ್ತು ಶ್ರೀ ಮುಸಾವೀರ್ ಬಾಷಾ ಎಂ. ರವರನ್ನು ಒಳಗೊಂಡ ಸಮಿತಿಯನ್ನು ದಿನಾಂಕ:20–05–2025 ರಂದು ನಡೆದ ಸಿಂಡಿಕೇಟ್ ಸಭೆಯುಲ್ಲಿ ರಚಿಸಲು ರಚಿಸಲಾಗಿತ್ತು. ಆದರೆ, ಈಗಾಗಲೇ ಎಲ್ಲಾ ಬಿಲ್ಲುಗಳು ಪಾವತಿಯಾಗಿದ್ದು, ಯಾವುದೇ ಕಾಮಗಾರಿಯ Third Party Inspection ಆಗಿಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ತಜ್ಞ ಇಂಜಿನಿಯರ್‌ಗಳು Third Party Inspection ಮಾಡಬೇಕಾಗುತ್ತದೆ ಎಂದರು. ಶ್ರೀ ಮುಸಾವೀರ್ ಬಾಷಾರವರು ಮುಂದುವರೆದು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ತಜ್ಞ ಇಂಜಿನಿಯರ್‌ಗಳು ಹಾಗೂ ಸಿಂಡಿಕೇಟ್ ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿತ್ತು. ಆದರೆ, ಯಾವುದೇ ಪರಿಶೀಲನೆ ಆಗಿಲ್ಲ. ಆದುದರಿಂದ ಸಂಬಂಧಪಟ್ಟ ಎಲ್ಲರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು.

ಕುಲಸಚಿವರು ಮಾತನಾಡಿ, ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸುವುದಾಗಿ ತಿಳಿಸಿದರು.

**2026–ಸಿಂ–1.32(ಎ–2):** **Ph.D. ಪ್ರವೇಶ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಮತ್ತೊಂದು ಪರೀಕ್ಷೆ ನೀಡುವ ಬಗ್ಗೆ.**

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಪಿಹೆಚ್.ಡಿ. ಪ್ರವೇಶ ಪರೀಕ್ಷೆ ಮತ್ತು ಉಳಿದ ಪ್ರಕ್ರಿಯೆಗಳು ಮುಗಿದ ನಂತರವೂ ಖಾಲಿ ಉಳಿಯುವ SC/ST & OBC ಸೀಟುಗಳನ್ನು ಭರ್ತಿ ಮಾಡುವ ಸಲುವಾಗಿ ಪ್ರವೇಶ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಮತ್ತೊಂದು ಪರೀಕ್ಷೆ ನಡೆಸಿ ಅವಕಾಶ ಮಾಡಿಕೊಡಿ ಎಂದರು.

ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ಖಾಲಿ ಉಳಿದಿರುವ ಸೀಟುಗಳ ಬಗ್ಗೆ ವಿಭಾಗಗಳಿಂದ ಮಾಹಿತಿ ಪಡೆದುಕೊಳ್ಳುತ್ತಿದ್ದೇವೆ. ಈ ಬಗ್ಗೆ ಕ್ರಮ ಕೈಗೊಂಡು ಸುತ್ತೋಲೆ ಹೊರಡಿಸಲಾಗುವುದು ಎಂದರು.

**2026–ಸಿಂ–1.32(ಬಿ):** **ಶ್ರೀ ಶಾಂತಕುಮಾರ್**: ಘಟಿಕೋತ್ಸವ ಕಾರ್ಯಕ್ರಮ ವಿಳಂಬವಾಗಿರುವ ಬಗ್ಗೆ:

ಶ್ರೀ ಶಾಂತಕುಮಾರ್‌ರವರು ಮಾತನಾಡಿ, ರಾಜ್ಯದ ಬಹುತೇಕ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಘಟಿಕೋತ್ಸವಗಳು ನಡೆಯುತ್ತಿವೆ. ನಾವು ಬಹಳ ಹಿಂದೆಯೇ ಸಿದ್ಧತೆಗಳನ್ನು ಆರಂಭಿಸಿದ್ದು, ಈಗ ಎಲ್ಲವೂ ಸ್ಥಗಿತಗೊಂಡಿದೆ. ಇದರಿಂದಾಗಿ ಪದವಿ ಪ್ರಮಾಣಪತ್ರಗಳಿಲ್ಲದೆ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ತುರ್ತು ಗಮನಹರಿಸಬೇಕು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಈಗಾಗಲೇ 2 ಬ್ಯಾಚ್‌ನ ಪದವೀಧರರು ಇರುವುದರಿಂದ 35 ಮತ್ತು 36ನೇ ಘಟಿಕೋತ್ಸವಗಳನ್ನು ಒಟ್ಟಿಗೆ ನಡೆಸುವ ಬಗ್ಗೆ ಯೋಜಿಸುತ್ತಿದ್ದೇವೆ ಎಂದು ಮಾಹಿತಿ ನೀಡಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

2026–ಸಿಂ–1.32(ಸಿ): **ಶ್ರೀ ಕೆ.ಪಿ.ಶ್ರೀಪಾಲ್:**

2026–ಸಿಂ–1.32(ಸಿ1): **ಪಿಹೆಚ್.ಡಿ. ಪ್ರವೇಶಕ್ಕೆ ಕೇಂದ್ರೀಕೃತ ಪರೀಕ್ಷೆ ನಡೆಸುವ ಕುರಿತು.**

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಬೇರೆ ವಿಶ್ವವಿದ್ಯಾಲಯಗಳಲ್ಲಿ ಯಶಸ್ವಿಯಾಗಿರುವಂತೆ ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಕೂಡ ಪಿಹೆಚ್.ಡಿ. ಪ್ರವೇಶಕ್ಕೆ ಕೇಂದ್ರೀಕೃತ ಪರೀಕ್ಷೆ ನಡೆಸುವ ಕುರಿತು ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ಚರ್ಚಿಸಲಾಗಿತ್ತು. ಈಗ ಅದರ ಸ್ಥಿತಿಗತಿಯ ಮಾಹಿತಿ ನೀಡುವಂತೆ ಕೋರಿದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಪಿಹೆಚ್.ಡಿ. ಪ್ರವೇಶ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಯಾರು ಸಿದ್ಧಪಡಿಸಿದ್ದಾರೆ ಮತ್ತು ಅದನ್ನು ಹೇಗೆ ಅಂತಿಮಗೊಳಿಸಲಾಗಿದೆ? ಎಂದರು

ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ಸ್ನಾತಕೋತ್ತರ ಅಧ್ಯಯನ ವಿಭಾಗಳಲ್ಲಿರುವ ಡಾಕ್ಟರಲ್ ಕಮಿಟಿಯ ಮೂಲಕ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಪರೀಕ್ಷಾ ವಿಭಾಗಕ್ಕೆ ನೀಡಿದ್ದಾರೆ. ನಾವು ರ‍್ಯಾಂಡಮ್ ಆಗಿ ಒಂದು ಸೆಟ್ಟನ್ನು ತೆಗೆದುಕೊಂಡು ಪರೀಕ್ಷೆ ನಡೆಸಿದ್ದೇವೆ. ಸಂಬಂಧಪಟ್ಟ ಅಧ್ಯಯನ ವಿಭಾಗದವರೇ ಮೌಲ್ಯಮಾಪನ ಮಾಡಿಕೊಟ್ಟಿದ್ದು, ಈಗಾಗಲೇ ಫಲಿತಾಂಶವನ್ನು ಕೂಡ ಪ್ರಕಟಿಸಿದ್ದೇವೆ ಎಂದರು. ಪ್ರೊ. ಆರ್.ಹಿರೇಮಣಿನಾಯ್ಕ್‌ರವರು ಮಾತನಾಡಿ, ಪಿಹೆಚ್.ಡಿ.,ಗಾಗಿಯೇ ಮಾನ್ಯ ಕುಲಾಧಿಪತಿಯವರಿಂದ ಅನುಮೋದನೆಗೊಂಡಿರುವ ರೆಗ್ಯುಲೇಷನ್ ಇದೆ. ನಾವು ರೆಗ್ಯುಲೇಷನ್ ಪ್ರಕಾರವೇ ಎಲ್ಲಾ ಪ್ರಕ್ರಿಯೆಗಳನ್ನು ಮಾಡಬೇಕು. ಅದರಲ್ಲಿ ಯಾವುದೇ ಬದಲಾವಣೆ ಆಗುವುದಾದಲ್ಲಿ Regulation ನಲ್ಲಿ Amendment ಆಗಬೇಕು ಎಂದರು.

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಪಿಹೆಚ್.ಡಿ. ಪ್ರವೇಶ ಪರೀಕ್ಷೆಯನ್ನು ಚೆನ್ನಾಗಿಯೇ ಬರೆದಿದ್ದರೂ ಕೂಡ ಕೆಲವು ವಿದ್ಯಾರ್ಥಿಗಳು ಫೇಲ್ ಆಗಿದ್ದಾರೆ. ಆದುದರಿಂದ, ಸ್ನಾತಕದಲ್ಲಿರುವಂತೆ ಉತ್ತರಪತ್ರಿಕೆಗಳ ಜೆರಾಕ್ಸ್ ಪ್ರತಿಗಳನ್ನು ಕೇಳಿದ ವಿದ್ಯಾರ್ಥಿಗಳಿಗೆ ನೀಡಬೇಕು. ಆಗ ವಿದ್ಯಾರ್ಥಿಗಳಿಗೆ ಸ್ವಲ್ಪಮಟ್ಟಿಗಾದರೂ ನ್ಯಾಯ ಸಿಗುತ್ತದೆ ಮತ್ತು ಮೌಲ್ಯಮಾಪಕರಿಗೆ ಎಚ್ಚರಿಕೆಯೂ ಆಗುತ್ತದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ. ಪ್ರವೇಶ ಪರೀಕ್ಷೆಯ ಜೆರಾಕ್ಸ್ ಪ್ರತಿಗಳನ್ನು ನೀಡುವ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

2026–ಸಿಂ–1.32(ಸಿ2): **ದ್ವಿಗುಣ ಅವಧಿ ಮುಗಿದ ವಿದ್ಯಾರ್ಥಿಗಳಿಗೆ ಪರೀಕ್ಷೆ ನೀಡುವ ಕುರಿತು.**

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ದ್ವಿಗುಣ ಅವಧಿ ಮುಗಿದಿರುವ ವಿದ್ಯಾರ್ಥಿಗಳು ಒಂದೆರಡು ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದು, ಪದವಿ ಮುಗಿಸದೇ ಅವರು, ಉನ್ನತ ಶಿಕ್ಷಣ ಪಡೆಯಲು ಮತ್ತು ಉದ್ಯೋಗದಲ್ಲಿರುವವರು ಬಡ್ತಿ ಮುಂತಾದ ಸೌಲಭ್ಯಗಳನ್ನು ಪಡೆಯಲು ಆಗುತ್ತಿಲ್ಲ. ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ಕೂಡ ಇದರ ಕುರಿತು ಚರ್ಚಿಸಿ ಪರೀಕ್ಷೆಗೆ ಅವಕಾಶ ನೀಡಬೇಕೆಂದು ನಿರ್ಣಯಿಸಲಾಗಿತ್ತು. ಆದುದರಿಂದ, ಅವಕಾಶ ನೀಡುವುದರ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಿ ಎಂದರು. ಎಲ್ಲಾ ಸದಸ್ಯರು ಇದಕ್ಕೆ ಒಕ್ಕೊರಲಿನಿಂದ ಆಗ್ರಹಿಸಿದರು.

ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿತ್ತಾದರೂ ಕೂಡ, ವಿದ್ಯಾವಿಷಯಕ ಪರಿಷತ್ತಿನಲ್ಲಿ ಅನುಮೋದನೆಯಾಗದ ಕಾರಣದಿಂದ ಪರೀಕ್ಷೆ ನಡೆಸಲು ಸಾಧ್ಯವಾಗುತ್ತಿಲ್ಲ ಎಂದರು. ಶ್ರೀ ಮುಸಾವೀರ್‌ಬಾಷಾರವರು ಮಾತನಾಡಿ, ಹಳೆಯ ಪಠ್ಯಕ್ರಮ, ಎನ್.ಇ.ಪಿ., ಎಸ್.ಇ.ಪಿ. ಪಠ್ಯಕ್ರಮ ಹೀಗೆ ಮೂರು ಬಾರಿ ಬದಲಾವಣೆಯಾಗಿದ್ದು, ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡದಿದ್ದಲ್ಲಿ ಅನ್ಯಾಯವಾಗುತ್ತದೆ. ಆದುದರಿಂದ ನಿರ್ಣಯವನ್ನು ಮರುಪರಿಶೀಲಿಸಿ ದ್ವಿಗುಣ ಅವಧಿ ಮುಗಿದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆದು ಪದವಿ ಪೂರೈಸಲು ಅವಕಾಶ ನೀಡಿ ಎಂದರು.

ಚರ್ಚೆಯ ನಂತರ, ದ್ವಿಗುಣ ಅವಧಿ ಮುಗಿದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಬೇಕೆಂದು ನಿರ್ಣಯಿಸಲಾಯಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

2026–ಸಿಂ–1.32(ಡ): **ಡಾ. ವೆಂಕಟೇಶ್**

2026–ಸಿಂ–1.32(ಡ): **ಸಂಯೋಜಿತ ಕಾಲೇಜಿನ ಅಧ್ಯಾಪಕರಿಗೆ ಗೈಡ್‌ಶಿಪ್ ನೀಡುವ ಬಗ್ಗೆ.**

ಡಾ. ವೆಂಕಟೇಶ್‌ರವರು ಮಾತನಾಡಿ, ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಮತ್ತು ಘಟಕ ಕಾಲೇಜುಗಳ ಅಧ್ಯಾಪಕರಿಗೆ ಮಾತ್ರ ಪಿಹೆಚ್.ಡಿ. ಗೈಡ್‌ಶಿಪ್ ನೀಡಲಾಗುತ್ತಿದ್ದು, ಸಂಯೋಜಿತ ಕಾಲೇಜಿನವರಿಗೆ ಕೂಡ ನೀಡಿ ಎಂದರು. ಪ್ರೊ.ಆರ್.ಹಿರೇಮಣಿನಾಯ್ಕರವರು ಮಾತನಾಡಿ, ಸರ್ಕಾರಿ ಕಾಲೇಜಿನ ಅಧ್ಯಾಪಕರು ಆಗಾಗ್ಗೆ ವರ್ಗಾವಣೆಯಾಗುತ್ತಿರುತ್ತಾರೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಅವರು ಎಲ್ಲಿಗೆ ವರ್ಗಾವಣೆಯಾದರೂ ಕೂಡ ಅವರು ಪಿಹೆಚ್.ಡಿ. ಗೈಡ್ ಆಗಿ ಮುಂದುವರೆಯುತ್ತಾರೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಯು.ಜಿ.ಸಿ. ನಿಯಮ ಮತ್ತು ವಿಶ್ವವಿದ್ಯಾಲಯದ ರೆಗ್ಯುಲೇಷನ್ ಪ್ರಕಾರ ಸಂಯೋಜಿತ ಕಾಲೇಜಿನವರು ಸಂಶೋಧನಾ ಕೇಂದ್ರದ ಮಾನ್ಯತೆ ಪಡೆದುಕೊಂಡರೆ, ಅಲ್ಲಿರುವ ಅರ್ಹ ಅಧ್ಯಾಪಕರಿಗೆ ಗೈಡ್‌ಶಿಪ್ ನೀಡಲಾಗುವುದು. ಮೊದಲು ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ ಅರ್ಜಿ ಸಲ್ಲಿಸಿದಲ್ಲಿ ವಿಶ್ವವಿದ್ಯಾಲಯದಿಂದ ಎಲ್ಲಾ ಸಹಕಾರ ನೀಡಲಾಗುವುದು. ಈಗಾಗಲೇ ಕೆಲ ಸಂಯೋಜಿತ ಕಾಲೇಜುಗಳಿಗೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲಾಗಿದೆ ಎಂದರು.

ಡಾ.ವೆಂಕಟೇಶ್‌ರವರು ಮುಂದುವರೆದು ಮಾತನಾಡಿ, ಈ ಹಿಂದೆ ಶಿವಮೊಗ್ಗದ ಡಿ.ವಿ.ಎಸ್. ಕಲಾ ಮತ್ತು ವಿಜ್ಞಾನ ಕಾಲೇಜಿನಿಂದ ರೂ.3.00ಲಕ್ಷಗಳ ಶುಲ್ಕ ಪಾವತಿಸಿ ಗಣಿತಶಾಸ್ತ್ರ ವಿಭಾಗಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆ ಪಡೆಯಲು ಅರ್ಜಿ ಸಲ್ಲಿಸಿದ್ದೆವು. ಆದರೆ, ತಾಂತ್ರಿಕ ಕಾರಣದಿಂದ ಮಂಜೂರಾತಿ ಸಿಗಲಿಲ್ಲ. ಪಾವತಿಸಿದ ಹಣವೂ ಬರಲಿಲ್ಲ. ಶುಲ್ಕವನ್ನು ಕಡಿಮೆ ಮಾಡಿದರೆ ಹೆಚ್ಚಿನ ಕಾಲೇಜುಗಳಿಂದ ಅರ್ಜಿ ಸಲ್ಲಿಸಲು ಅನುಕೂಲವಾಗುತ್ತದೆ ಎಂದರು. ಡಾ.ಚಿದಾನಂದರವರು ಮಾತನಾಡಿ ರಾಷ್ಟ್ರೀಯ ಶಿಕ್ಷಣ ಮಹಾವಿದ್ಯಾಲಯದಿಂದ 02 ಬಾರಿ ಅರ್ಜಿ ಸಲ್ಲಿಸಲಾಗಿತ್ತು. ಆದರೆ, ಸಂಬಂಧಿಸಿದ ಸ್ನಾತಕೋತ್ತರ ಕೋರ್ಸ್ ಇರಬೇಕೆಂಬ ಕಾರಣದಿಂದ ನಿರಾಕರಿಸಲಾಯಿತು. ಈ ನಿಯಮವನ್ನು ಇನ್ನೊಮ್ಮೆ ಮರುಪರಿಶೀಲಿಸಿ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ ಗಣಿತಶಾಸ್ತ್ರ ವಿಭಾಗಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಬಹುದು. ಆದರೆ, ರಸಾಯನಶಾಸ್ತ್ರ ಮುಂತಾದ ವಿಷಯಗಳಲ್ಲಿ ಸುಸಜ್ಜಿತ ಪ್ರಯೋಗಶಾಲೆ ಮುಂತಾದ ಅಗತ್ಯ ಮೂಲಭೂತ ಸೌಲಭ್ಯಗಳು ಇರಬೇಕಾಗುತ್ತದೆ ಎಂದರು.

2026–ಸಿಂ–1.32(ಇ): **ಶ್ರೀಮತಿ ಸಾಕಮ್ಮ**

2026–ಸಿಂ–1.32(ಇ1): **ಡಾ.ಎನ್.ಜೆ.ಪಾಲಾಕ್ಷನಾಯ್ಕ ಮತ್ತು ಶ್ರೀ ಚಂದ್ರಕಾಂತ ಎಂ. ಉಪಕುಲಸಚಿವರು ಇವರ ಬಡ್ತಿ ಸೌಲಭ್ಯಗಳ ಕುರಿತು.**

ಪ್ರೊ. ಸಾಕಮ್ಮ ಬಿ.ರವರು ಮಾತನಾಡಿ, ಹಿಂದಿನ ಸಭೆಯಲ್ಲಿ ಇಬ್ಬರನ್ನು ಹೊರತುಪಡಿಸಿ ಉಳಿದವರಿಗೆ ಉಪಕುಸಚಿವ ಹುದ್ದೆಯ ಸೌಲಭ್ಯಗಳನ್ನು ನೀಡಬೇಕೆಂದು ನಿರ್ಣಯಿಸಲಾಯಿತ್ತು. ಅದರ ಕುರಿತು ಮಾಹಿತಿ ಒದಗಿಸುವಂತೆ ಕೇಳಿದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಉದ್ಯೋಗಿಯಾಗಿರುವ ಶ್ರೀ ಚಂದ್ರಕಾಂತ್ ಎಂ. ಉಪಕುಲಸಚಿವರು ಇವರಿಗೆ, ವಿವಿಧ ಕಾರಣಗಳಿಂದಾಗಿ ಸಹಾಯಕ ಕುಲಸಚಿವ ಹುದ್ದೆಯಿಂದ ಅಧೀಕ್ಷಕ ಹುದ್ದೆಗೆ ಹಿಂಬಡ್ತಿ ನೀಡಿ, 2012ನೇ ಇಸವಿಯಲ್ಲಿದ್ದ ಅಧೀಕ್ಷಕ ಹುದ್ದೆಯ ವೇತನವನ್ನೇ ಪಾವತಿಸಲಾಗುತ್ತಿತ್ತು. ನಾನು ಕುಲಸಚಿವನಾಗಿ ಬಂದ ನಂತರ ಅವರ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ, ವಿವಿಧ ತಜ್ಞರುಗಳ ಸಲಹೆಗಳನ್ನು ಪಡೆದುಕೊಂಡು ನ್ಯಾಯಾಲಯದ ತೀರ್ಪುಗಳನ್ನು ಪರಾಮರ್ಶಿಸಿ ಅವರಿಗೆ ಅರ್ಹತಾ ದಿನಾಂಕದಿಂದಲೇ ಅನ್ವಯವಾಗುವಂತೆ ಮತ್ತೆ ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡಲಾಗಿತ್ತು. ನಂತರದಲ್ಲಿ, ದಿನಾಂಕ:26–09–2025 ರಂದು ಉಪಕುಲಸಚಿವ ಹುದ್ದೆಗೆ ನಡೆದ ಸಂದರ್ಶನದಲ್ಲಿ ಆಯ್ಕೆಮಾಡಿದ್ದು, ಆಯ್ಕೆಯಾಗಿದ್ದ ಒಬ್ಬ ಅಭ್ಯರ್ಥಿಯು ದಿನಾಂಕ:30–09–2025ರಂದು ವಯೋನಿವೃತ್ತಿ ಹೊಂದಲಿದ್ದ ಹಿನ್ನೆಲೆಯಲ್ಲಿ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ದಿನಾಂಕ:29-09-2025 ರಂದು ಬಡ್ತಿ ಆದೇಶವನ್ನು ಕೂಡ ನೀಡಲಾಗಿತ್ತು. ಆದರೆ, ಯಾರಿಗೂ ಉಪಕುಲಸಚಿವ ಹುದ್ದೆಯ ವೇತನ ನಿಗದೀಕರಣ ಮಾಡಿರಲಿಲ್ಲ. ಸಿಂಡಿಕೇಟ್ ಸಭೆಯಲ್ಲಿ ಡಾ. ಎನ್.ಜೆ. ಪಾಲಾಕ್ಷನಾಯ್ಕ ಮತ್ತು ಶ್ರೀ ಚಂದ್ರಕಾಂತ ಎಂ ಇವರಿಗೆ ಬಡ್ತಿ ನೀಡಿದ ಕ್ರಮವನ್ನು ಕೆಲವು ಸದಸ್ಯರು ಆಕ್ಷೇಪಿಸಿದ್ದರು. ಆದಾಗ್ಯೂ ಸುದೀರ್ಘ ಚರ್ಚೆಯ ನಂತರ ಡಾ. ಎನ್.ಜೆ. ಪಾಲಾಕ್ಷನಾಯ್ಕ ಮತ್ತು ಶ್ರೀ ಚಂದ್ರಕಾಂತ ಎಂ. ಇವರನ್ನು ಹೊರತುಪಡಿಸಿ ಉಳಿದವರಿಗೆ ಉಪಕುಲಸಚಿವ ಹುದ್ದೆಗೆ ನೀಡಲಾದ ಬಡ್ತಿಯನ್ನು ಅನುಮೋದಿಸಲಾಯಿತು ಮತ್ತು ಅವರುಗಳಿಗೆ ಲಭ್ಯವಿರುವ ಎಲ್ಲಾ ಸೇವಾ ಸೌಲಭ್ಯಗಳನ್ನು ವಿಸ್ತರಿಸಲು ಅನುಮೋದಿಸಿದ ಸಭೆಯು, ಡಾ. ಎನ್.ಜೆ. ಪಾಲಾಕ್ಷನಾಯ್ಕ ಮತ್ತು ಶ್ರೀ ಚಂದ್ರಕಾಂತ ಎಂ. ಇವರ ಬಗ್ಗೆ ಇರುವ ದೂರುಗಳ ಬಗ್ಗೆ ಪೂರಕ ದಾಖಲೆಗಳನ್ನು ಅವರು ಸಲ್ಲಿಸಬೇಕು. ಅದನ್ನು ಪರಿಶೀಲಿಸಿ ಅವರಿಗೆ ವೇತನ ನಿಗದೀಕರಣ ಮಾಡುವ ಬಗ್ಗೆ ಕ್ರಮಕೈಗೊಳ್ಳಬೇಕು ಎಂದು ನಿರ್ಣಯಿಸಲಾಗಿತ್ತು.

ಸಿಂಡಿಕೇಟ್ ಸಭೆಯ ನಿರ್ಣಯದಂತೆ, ಇಬ್ಬರಿಗೂ ದಿನಾಂಕ:18-11-2025ರಂದು ಮೆಮೋ ನೀಡಲಾಗಿತ್ತು. ಡಾ.ಎನ್.ಜೆ.ಪಾಲಾಕ್ಷನಾಯ್ಕರವರು ದಿನಾಂಕ:20-11-2025ರಂದು ಉತ್ತರಿಸಿ ಅಗತ್ಯ ದಾಖಲೆಗಳನ್ನು ಸಲ್ಲಿಸಿದ್ದರು. ಅವರು ಸಲ್ಲಿಸಿದ್ದ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಪರಿಣಿತರಿಂದ ಮಾಹಿತಿ ಪಡೆದುಕೊಂಡು ಅವರಿಗೆ ಉಪಕುಲಸಚಿವ ಹುದ್ದೆಯ ವೇತನ ನಿಗದೀಕರಣ ಆದೇಶವನ್ನು ಹೊರಡಿಸಲಾಗಿದೆ.

ಆದರೆ ಶ್ರೀ ಎಂ.ಚಂದ್ರಕಾಂತರವರಿಗೆ ನೀಡಿದ ಮೆಮೋಗೆ ಸಂಬಂಧಪಟ್ಟಂತೆ ಅವರ ವಿರುದ್ಧ ಇದ್ದ ಆರೋಪಗಳ ಕುರಿತು ಸೂಕ್ತ ಸಮಜಾಯಿಷಿ ಹಾಗೂ ದಾಖಲೆಗಳನ್ನು ನೀಡದೇ, ಈ ಕೆಳಗಿನಂತೆ ಪತ್ರ ಬರೆದಿರುತ್ತಾರೆ.

1) **ಸಿಂಡಿಕೇಟ್ ಸದಸ್ಯರ ಮೌಖಿಕ ಆಕ್ಷೇಪಣೆ ಬಗ್ಗೆ:** ಕಳೆದ ಹಲವಾರು ತಿಂಗಳುಗಳಿಂದ ಹಲವು ಸಿಂಡಿಕೇಟ್ ಸದಸ್ಯರು ನನ್ನ ಹೆಸರನ್ನು ಉಲ್ಲೇಖಿಸುತ್ತಿದ್ದು ದೂರಿನ ವಿವರ/ವಿಷಯ ತಿಳಿದಿರುವುದಿಲ್ಲ. ಈಗಲೂ ಕೂಡ ಯಾವ ವಿಷಯ ಎಂಬ ಮಾಹಿತಿ ಇರುವುದಿಲ್ಲ. ವಿಶ್ವವಿದ್ಯಾಲಯದಲ್ಲಿ ಸುಮಾರು 37 ವರ್ಷಗಳಿಗಿಂತ ಹೆಚ್ಚು ಕಾಲದಿಂದ ನಿಷ್ಕಳಂಕ ಸೇವೆ ಸಲ್ಲಿಸುತ್ತಿರುವ ನನಗೆ ತಿಳಿದಿರುವ ಪ್ರಕಾರ ವಿಷಯರಹಿತ, ಆಧಾರರಹಿತ ಮೌಖಿಕ ದೂರು, ಅದರ ಪರಿಗಣನೆಗೆ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ವಿಶ್ವವಿದ್ಯಾಲಯದ ನೌಕರನಾಗಿ ಸಿಂಡಿಕೇಟ್‌ಗೆ, ಮೇಲಾಧಿಕಾರಿಗಳಿಗೆ ನನ್ನ ತಪ್ಪಿಗೆ/ನಿರ್ಲಕ್ಷಕ್ಕೆ ದಂಡನೆ ವಿಧಿಸುವ ಅಧಿಕಾರವಿರುವುದನ್ನು ಪ್ರಶ್ನಿಸುತ್ತಿಲ್ಲ. ಆದರೆ, ಖಚಿತ ವಿಷಯ/ಆಧಾರವಿಲ್ಲದ ದೂರನ್ನು ಮೌಖಿಕವಾಗಿ ನೀಡಿದಾಕ್ಷಣ ಆಡಳಿತವು ಅದನ್ನು ಪರಿಗಣಿಸುವ ಬಗ್ಗೆ ನನ್ನ ಆಕ್ಷೇಪಣೆ ಇದೆ. ಸಾರ್ವಜನಿಕ ನೌಕರನಾಗಿ ಯಾವುದೇ ನಾಗರಿಕರೂ ಸೇರಿದಂತೆ ಸಿಂಡಿಕೇಟ್ ಸದಸ್ಯರೂ ಸಹ ದೂರನ್ನು ಸಲ್ಲಿಸಬಹುದೆಂಬುದನ್ನು ತಿಳಿದಿರುತ್ತೇನೆ. ಯಾರು ಕೂಡ ಪ್ರಶ್ನಾತೀತರಲ್ಲ ಮಾತ್ರವಲ್ಲದೇ ದೂರನ್ನು ಜವಾಬ್ದಾರಿಯುತ ಸದಸ್ಯರಾಗಿ ಲಿಖಿತವಾಗಿ ಯಾವುದೇ ವಿಷಯ ಸ್ಪಷ್ಟಪಡಿಸದೇ ಇದ್ದಲ್ಲಿ ಸಂಬಂಧಿಸಿದ ವ್ಯಕ್ತಿ, ಆತನ ಕುಟುಂಬ, ಆತನ ಸಾಮಾಜಿಕ ಜೀವನದ ಘನತೆಯ ಬದುಕಿಗೆ ಧಕ್ಕೆ ತರುವಂತೆ ಮಾಡಲು ಯಾರಿಗೂ ಅಧಿಕಾರವಿರುವುದಿಲ್ಲ. ಇಂತಹ ದೂರನ್ನು ಆಧರಿಸಿ ನಡಾವಳಿಗಳಲ್ಲಿ ದಾಖಲಿಸುವ ಮೂಲಕ ನನ್ನ ಘನತೆಯ ಬದುಕಿಗೆ ಬೆದರಿಕೆ ಒಡ್ಡಿ ಮಾನಸಿಕ ಹಿಂಸೆಗೆ ಒಳಪಡಿಸುತ್ತಿರುವುದನ್ನು ಒಪ್ಪಲು ಸಾಧ್ಯವಿರುವುದಿಲ್ಲ.

**ಲೋಕಾಯುಕ್ತ ಪತ್ರದ ಕುರಿತು:** ದಿನಾಂಕ:07-02-2023 ರ ಲೋಕಾಯುಕ್ತ ಕಛೇರಿಯ ಪತ್ರದ ಪ್ರತಿಯನ್ನು ಲಗತ್ತಿಸಿದ್ದು, ಅದರಲ್ಲಿ ನನ್ನ ನೇಮಕಾತಿ, ಬಡ್ತಿ, ವೇತನಗಳ ಬಗ್ಗೆ ಸೇವಾ ವಿವರ ಮಾಹಿತಿ ಕೋರಿರುತ್ತಾರೆ. ಈ ಬಗ್ಗೆ ವಿಶ್ವವಿದ್ಯಾಲಯ ಇದುವರೆಗೂ ನನಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಇದಕ್ಕೆ ಸೂಕ್ತ ದಾಖಲಾತಿಗಳೊಂದಿಗೆ ವಿವರ ಒದಗಿಸುವುದು ವಿಶ್ವವಿದ್ಯಾಲಯದ ಜವಾಬ್ದಾರಿಯಾಗಿದ್ದು, ಇದಕ್ಕೆ ನನ್ನ ಆಕ್ಷೇಪಣೆ ಇರುವುದಿಲ್ಲ.

3) **ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಪತ್ರದ ಕುರಿತು:** ದಿನಾಂಕ:.25-01-2024ರ ಪತ್ರದಲ್ಲಿ ನನ್ನ ನೇಮಕಾತಿ, ವಿದ್ಯಾರ್ಹತೆ, ರೋಸ್ಟರ್ ಬಗ್ಗೆ ವಿಚಾರಣೆಗೆ ಮಾಹಿತಿ ಕೋರಿದ್ದು, ದಿನಾಂಕ:22-06-2024ರಂದು ತಾವು ಒದಗಿಸಿದ ಮಾಹಿತಿ ನಿಯಮಗಳಿಗೆ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ವಿರುದ್ಧವಾಗಿದೆಯೆಂದು ಕೆಳಗಿನ ಸಿಬ್ಬಂದಿ ನೀಡಿದ ತಪ್ಪು ಮಾಹಿತಿ ಆಧರಿಸಿ ಬರೆದ ಪತ್ರವನ್ನು ಪರಿಷ್ಕರಿಸಿ ದಿನಾಂಕ:29-10-2024/06-11-2024 ರಂದು ಪುನ: ಮಾಹಿತಿ ನೀಡಿರುವ ಬಗ್ಗೆ ನನಗೆ ಪ್ರತಿ ನೀಡಲಾಗಿದೆ. ಈ ಬಗ್ಗೆ ಮುಂದಿನ ಕ್ರಮ ಸದರಿ ಪ್ರಾಧಿಕಾರ ಕೈಗೊಳ್ಳುತ್ತದೆ.

**ಮೇಲ್ಕಂಡ ವಿವರಗಳೊಂದಿಗೆ ಸಿಂಡಿಕೇಟ್ ಸಭೆಯ ನಡಾವಳಿಯಲ್ಲಿ ನೇಮಕಾತಿ ಮಂಡಳಿ ಕುರಿತು ದಾಖಲಾಗಿರುವ ಬಗ್ಗೆ ನಿಯಮಗಳಲ್ಲಿರುವ ಅಂಶಗಳನ್ನು ಕೆಳಕಂಡಂತೆ ತಮ್ಮ ಗಮನಕ್ಕೆ ತರಬಯಸುತ್ತೇನೆ.**

4) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದ ಪ್ರಕರಣ 57ರ ಉಪ ಪ್ರಕರಣ(5)ರ ಪ್ರಕಾರ ನೇಮಕಾತಿ ಮಂಡಳಿ ಮತ್ತು ಸಿಂಡಿಕೇಟ್ ನಡುವೆ ಯಾವುದೇ ಭಿನ್ನಾಭಿಪ್ರಾಯ ಉಂಟಾದರೆ ಆ ವಿಷಯವನ್ನು ಸರ್ಕಾರದ ಶಿಕ್ಷಣ ಇಲಾಖೆಯ ಮೂಲಕ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು, ಕುಲಾಧಿಪತಿಯವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು ಎಂದು ತಿಳಿಸಿದ್ದು, ಈ ರೀತಿ ನಿಯಮಾನುಸಾರ ಕ್ರಮ ಕೈಗೊಳ್ಳದೇ ವೇತನ ನಿಗದಿಗೆ ಷರತ್ತನ್ನು ವಿಧಿಸಿ ನಿರ್ಣಯ ಕೈಗೊಳ್ಳುವ ಮೂಲಕ ನಿಯಮಗಳನ್ನು ಉಲ್ಲಂಘಿಸಿದಂತಾಗುತ್ತದೆ. ಆದ್ದರಿಂದ, ನನ್ನ ಬಡ್ತಿ ಬಗ್ಗೆ ಭಿನ್ನಾಭಿಪ್ರಾಯವಿದ್ದಲ್ಲಿ ಸದರಿ ನಿಯಮದಂತೆ ಕ್ರಮಕೈಗೊಳ್ಳಬಹುದಾಗಿದೆ.

5) 2023ರಲ್ಲಿ ಅಂದಿನ ಅಧಿಕಾರದಲ್ಲಿದ್ದ ನಿಯಮಗಳ ಜ್ಞಾನದ ಕೊರತೆ, ವೈಯಕ್ತಿಕ ದ್ವೇಷ ಸಾಧನೆಗಾಗಿ ಅಧಿಕಾರ ದುರ್ಬಳಕೆ ಮಾಡಿಕೊಂಡು ಅಕ್ರಮ ಕೂಟವೊಂದು ಹೊರಡಿಸಿದ ಆದೇಶಗಳ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ವಿಶ್ವವಿದ್ಯಾಲಯ ತನ್ನ ದಿನಾಂಕ:06-11-2024 ಮತ್ತು ದಿನಾಂಕ: 20-08-2025 ರ ಆದೇಶಗಳ ಮೂಲಕ ನನ್ನ ನೇಮಕಾತಿ, ಬಡ್ತಿ, ವೇತನ ನಿಗದಿ ಕ್ರಮಬದ್ಧವೆಂದು ಹೇಳಿರುವುದನ್ನು ಹಾಗೂ ಸದರಿ ಅಕ್ರಮ ಕೂಟದ ಸದಸ್ಯರುಗಳ ಸೇವಾ ಚಾರಿತ್ರ್ಯದ ಬಗ್ಗೆ ಕುಲಾಧಿಪತಿಗಳು, ಸರ್ಕಾರ ಹಾಗೂ ವಿಶ್ವವಿದ್ಯಾಲಯದ ಆದೇಶಗಳನ್ನು ಗಮನಕ್ಕೆ ತರಬಯಸುತ್ತೇನೆ. ಅಲ್ಲದೇ ಈ ಬಗ್ಗೆ ನಾನೂ ಕೂಡ ಕಾನೂನು ಪ್ರಕ್ರಿಯೆ ಕೈಗೊಂಡಿರುತ್ತೇನೆ.

ಈ ಎಲ್ಲಾ ಅಂಶಗಳೊಂದಿಗೆ ನನ್ನಿಂದ ಯಾವುದೇ ಅಕ್ರಮ, ಕರ್ತವ್ಯ ನಿರ್ಲಕ್ಷ್ಯ ಮುಂತಾದ ದುರ್ನಡತೆಯಿದ್ದಲ್ಲಿ ಸೂಕ್ತ ಕಾರಣಗಳೊಂದಿಗೆ ನಿಯಮಾನುಸಾರ ದಿನಾಂಕ:31-05-2030 ರವರೆಗೆ (ನಿವೃತ್ತಿ ದಿನಾಂಕ:31-05-2026) ಅವಕಾಶವಿದ್ದು, ಅದನ್ನು ಬಿಟ್ಟು ವೈಯಕ್ತಿಕ ಹಗೆ ಸಾಧನೆ ರೀತ್ಯ ನಿಯಮಗಳಲ್ಲಿ ಇಲ್ಲದ ಬೆದರಿಕೆ ಒಡ್ಡಬಾರದಾಗಿ ವಿನಂತಿಸುತ್ತೇನೆ". ಎಂದು ಬರೆದಿರುತ್ತಾರೆ.

ಶ್ರೀ ಎಂ. ಚಂದ್ರಕಾಂತರವರು ವಿಶ್ವವಿದ್ಯಾಲಯದ ಮೆಮೋಗೆ ದಾಖಲೆಗಳ ಸಹಿತ ಸೂಕ್ತ ಸಮಜಾಯಿಷಿ ನೀಡದೇ ಮೇಲಿನಂತೆ ಪತ್ರ ಬರೆದ ಹಿನ್ನೆಲೆಯಲ್ಲಿ ಸಿಂಡಿಕೇಟ್ ನಿರ್ಣಯದ ಪ್ರಕಾರ ಅವರ ವಿರುದ್ಧದ ಆರೋಪಗಳ ಕುರಿತು ಪರಿಶೀಲಿಸಲು ಸಾಧ್ಯವಾಗದಿದ್ದರಿಂದ ಅವರಿಗೆ ಉಪಕುಲಸಚಿವ ಹುದ್ದೆಯಲ್ಲಿ ವೇತನ ನಿಗದೀಕರಣ ಮಾಡಿರುವುದಿಲ್ಲ.

ಶ್ರೀ ಚಂದ್ರಕಾಂತ ಎಂ. ಉಪಕುಲಸಚಿವರು ಇವರ ವಿರುದ್ಧ ಹಲವಾರು ದೂರುಗಳು ಸಲ್ಲಿಕೆಯಾಗಿದ್ದವು. ಅಲ್ಲದೇ ಅವರು ಅಕ್ರಮವಾಗಿ ವೇತನ ನಿಗದೀಕರಣ ಮಾಡಿಕೊಂಡಿದ್ದ ಬಗ್ಗೆ ವಿಚಾರಣೆ ಕೂಡ ನಡೆದಿದೆ. ಇವರಿಗೆ, ವಿವಿಧ ಕಾರಣಗಳಿಂದಾಗಿ ಸಹಾಯಕ ಕುಲಸಚಿವ ಹುದ್ದೆಯಿಂದ ಅಧೀಕ್ಷಕ ಹುದ್ದೆಗೆ ಹಿಂಬಡ್ತಿ ನೀಡಿ, 2012ನೇ ಇಸವಿಯಲ್ಲಿದ್ದ ಅಧೀಕ್ಷಕ ಹುದ್ದೆಯ ವೇತನವನ್ನೇ ಪಾವತಿಸಲಾಗುತ್ತಿತ್ತು. ನಾನು ಕುಲಸಚಿವನಾಗಿ ಬಂದ ನಂತರ ಅವರ ಪ್ರಕರಣವನ್ನು ಮಾನವೀಯತೆಯ ನೆಲೆಯಲ್ಲಿ ಪರಿಶೀಲಿಸಿ, ಅವರಿಗೆ ಅರ್ಹತಾ ದಿನಾಂಕದಿಂದಲೇ ಅನ್ವಯವಾಗುವಂತೆ ಮತ್ತೆ ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡಿ, ವೇತನ ನಿಗದೀಕರಣವನ್ನು ಮಾಡಲಾಗಿದೆ. ನಂತರದಲ್ಲಿ, ಸಂದರ್ಶನದ ಮೂಲಕ ಉಪಕುಲಸಚಿವ ಹುದ್ದೆಗೆ ಕೂಡ ಆಯ್ಕೆಮಾಡಲಾಗಿದೆ. ಇಷ್ಟಾದರೂ ಕೂಡ ಅವರು, ನಾನೂ ಸೇರಿದಂತೆ ವಿಶ್ವವಿದ್ಯಾಲಯದ ಹಿಂದಿನ ಕುಲಪತಿಯವರು, ಕುಲಸಚಿವರು, ಹಣಕಾಸು ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸೇರಿ 8 ಜನರ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ವಿರುದ್ಧ ವಕೀಲರ ಮೂಲಕ Request for Grant of Sanction to prosecute under section 198 of Bharathiya Nayaya Sanhita, 2023 ಎಂದು ಮಾನ್ಯ ರಾಜ್ಯಪಾಲರು, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕುಲಪತಿಗಳು ಹಾಗೂ ಕುಲಸಚಿವರಿಗೆ ನ್ಯಾಯಾದೀಶರಿಂದ ಪತ್ರ ಕಳುಹಿಸಿರುತ್ತಾರೆ. ಸದರಿ ಪತ್ರದಲ್ಲಿ Sri A.L. Manjunatha the Registrar of Kuvempu University even after continuous visit by my client and directions given by the Vice-chancellor of Kuvempu University in writing to the concerned office to dispose the matter in accordance to the directions given by the High Court of Karnataka in order dated 07-09-2023. Yet intentenally and maliciously delayed desposal and implementation of it by two years causing undue hardship, financial loss, and mental agony to my client. ಎಂದು ಬರೆದಿರುತ್ತಾರೆ. ಬಹಳ ವರ್ಷಗಳಿಂದ ಬಾಕಿ ಇದ್ದ ಅವರ ಸಮಸ್ಯೆಯನ್ನು ನಾನು ಮುತುವರ್ಜಿ ವಹಿಸಿ ಪೂರ್ಣಪ್ರಮಾಣದಲ್ಲಿ ಬಗೆಹರಿಸಿದ್ದಕ್ಕೆ ಈ ರೀತಿ ಪ್ರತಿಕ್ರಿಯೆ ಅವರಿಂದ ಬಂದಿದೆ. ಈ ಹಿನ್ನೆಲೆಯಲ್ಲಿ ನಿರ್ಣಯಕ್ಕಾಗಿ ಸಭೆಗೆ ಮಂಡಿಸಲಾಗಿದೆ ಎಂದರು. ಪ್ರೊ. ಸಾಕಮ್ಮ ಬಿ.ರವರು ಮಾತನಾಡಿ, ಅವರ ವಿರುದ್ಧ ಬಹಳ ಅರೋಪಗಳಿದ್ದು, ಅವರಿಗೆ ಯಾವುದೇ ಸೌಲಭ್ಯಗಳನ್ನು ನೀಡಬಾರದೆಂದು ಹಿಂದಿನ ಬಹಳಷ್ಟು ಸಿಂಡಿಕೇಟ್ ಸಭೆಗಳಲ್ಲಿ ಚರ್ಚೆಗಳಾಗಿದ್ದವು. ಆದಾಗ್ಯೂ ಬಡ್ತಿ ಸೇರಿದಂತೆ ಅವರಿಗೆ ಹಲವಾರು ಸೌಲಭ್ಯಗಳನ್ನು ನೀಡಲಾಗಿದೆ. ಅವರಿನ್ನೂ ಸ್ಥಾನಪನ್ನ ಅವಧಿಯಲ್ಲಿರುವುದರಿಂದ ಅವರಿಗೆ ಉಪಕುಲಸಚಿವ ಹುದ್ದೆಗೆ ನೀಡಿರುವ ಬಡ್ತಿಯನ್ನು ಹಿಂಪಡೆದು ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ ಸದಸ್ಯರು ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳು ಸೇರಿದಂತೆ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ಅವರು ವಕೀಲರ ಮೂಲಕ ಕಳುಹಿಸಿರುವ Request for Grant of Sanction to prosecute under section 198 of Bharathiya Nyaya Sanhita, 2023 ಗೆ ಸಭೆಯು ಅನುಮತಿಸುವುದಿಲ್ಲ ಎಂದರು. ಬಹುತೇಕ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

ಚರ್ಚೆಯ ನಂತರ, ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳು ಸೇರಿದಂತೆ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ಶ್ರೀ ಎಂ.ಚಂದ್ರಕಾಂತ್‌ರವರು ವಕೀಲರ ಮೂಲಕ ಕಳುಹಿಸಿರುವ Request for Grant of Sanction to prosecute under section 198 of Bharathiya Nyaya Sanhita, 2023 ಗೆ ಅನುಮತಿ ನೀಡಲು ನಿರಾಕರಿಸಿದ ಸಭೆಯು, ಶ್ರೀ ಎಂ. ಚಂದ್ರಕಾಂತರವರ ವಿರುದ್ಧ ಬಂದಿರುವ ಎಲ್ಲಾ ಆರೋಪಗಳ ಕುರಿತಾಗಿ ನಿವೃತ್ತ ನ್ಯಾಯಾದೀಶರಿಂದ ಇಲಾಖಾ ವಿಚಾರಣೆ ನಡೆಸಬೇಕೆಂದು ನಿರ್ಣಯಿಸಿತು.

**2026–ಸಿಂ–1.32(ಎಫ್):** **ಶ್ರೀ ಶಿವಕುಮಾರ್ ಎಂ.**

**2026–ಸಿಂ–1.32(ಎಫ್1):** **ವಿದ್ಯಾರ್ಥಿಗಳ ಅಂಕಗಳಲ್ಲಿ ವ್ಯತ್ಯಾಸಗಳಿರುವ ಕುರಿತು**

ಶ್ರೀ ಶಿವಕುಮಾರ್‌ರವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪದವಿ ಉತ್ತರಪತ್ರಿಕೆಗಳ ಮೌಲ್ಯಮಾಪನ ಮತ್ತು ಅಂಕಗಳ ನೀಡಿಕೆಯಲ್ಲಿ ಬಹಳಷ್ಟು ಲೋಪಗಳಾಗುತ್ತಿವೆ. ವಿಶ್ವವಿದ್ಯಾಲಯ ಪ್ರಕಟಿಸಿದ ಫಲಿತಾಂಶದಲ್ಲಿ 10 ಅಂಕಗಳು ಬಂದಿದ್ದು, ಮರು ಮೌಲ್ಯಮಾಪನದಲ್ಲಿ 50 ರಿಂದ 60ರವರೆಗೆ ಅಂಕಗಳು ಬಂದಿವೆ. ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸದಿದ್ದಲ್ಲಿ ಅವರ ಭವಿಷ್ಯ ಹಾಳಾಗುತ್ತಿತ್ತು. ಈ ರೀತಿಯ ಮೌಲ್ಯಮಾಪನ ಮಾಡಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಅನುತ್ತೀರ್ಣರಾಗಿದ್ದ ಕೆಲವು ವಿದ್ಯಾರ್ಥಿಗಳಿಗೆ ಮರು ಮೌಲ್ಯಮಾಪನದಲ್ಲಿ 80 ರವರೆಗೂ ಅಂಕಗಳು ಬಂದಿರುವುದಾಗಿ ವರದಿಯಾಗಿದೆ. ಬೇಜವಾಬ್ದಾರಿಯುತ ಮೌಲ್ಯಮಾಪನ ಮಾಡುವ ಮೂಲಕ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾಗುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವುದು ಅಗತ್ಯ ಎಂದರು. ಶ್ರೀ ಲಕ್ಷ್ಮೀಕಾಂತ ಚಿಮನೂರ್‌ರವರು ಮಾತನಾಡಿ, ಬೇಜವಾಬ್ದಾರಿಯುತ ಮೌಲ್ಯಮಾಪಕರಿಂದ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತಿದ್ದು, ಅವರ ವಿರುದ್ಧ ಕ್ರಮಕೈಗೊಳ್ಳುವ ಮೂಲಕ ವಿದ್ಯಾರ್ಥಿಗಳಿಗೆ ಒಳಿತಾಗುವಂತೆ ಹಾಗೂ ವಿಶ್ವವಿದ್ಯಾಲಯಕ್ಕೆ ಕೂಡ ಒಳ್ಳೆಯ ಹೆಸರು ಬರುವಂತೆ ಆಗಬೇಕು ಎಂದರು. ಶ್ರೀ ಶಿವಕುಮಾರ್‌ರವರು ಮಾತನಾಡಿ, ಅಂಕಗಳಲ್ಲಿ ವ್ಯತ್ಯಾಸವಾಗುತ್ತಿರುವುದರಲ್ಲಿ ಪರೀಕ್ಷಾ ವಿಭಾಗದ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಕೆಲವು ಸಿಬ್ಬಂದಿಗಳ ಕೈವಾಡ ಇರುವುದಾಗಿ ಆರೋಪಗಳಿವೆ. ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಿ ಎಂದರು. ಇದಕ್ಕೆ ಶ್ರೀ ಮುಸಾವೀರ್ ಬಾಷಾರವರು ಕೂಡ ಧ್ವನಿಗೂಡಿಸಿದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಈಗಿನ ಮೌಲ್ಯಮಾಪನ ಸೇರಿದಂತೆ ಪರೀಕ್ಷಾ ವ್ಯವಸ್ಥೆಯಲ್ಲಿ ಆಗುತ್ತಿರುವ ಸುಮಾರು 20 ತಪ್ಪುಗಳನ್ನು ಪಟ್ಟಿ ಮಾಡಿದ್ದೇವೆ. ಇದರ ಕುರಿತಾಗಿ ಮುಂದಿನ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/–
ಕುಲಪತಿಗಳು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.